ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೪—೧೧—೧೯೩೮. ಸಂಪುಟ ೧೪] [ಸಂಚಿಕೆ ೨೮

The Bombay Life Assurance Company Ltd.

(Estd. 1908.)

45-47, Churchgate Street, Fort-Bombay.

Progress Proves Its Popularity.

Year	Business in force	Claims Paid	Life Assurance Fund
1931	2,26,82,430	2,91,880	33,24,809
1933	3,07,98,435	3,54,003	50,04,871
1935	4,42,51,214	5,75,198	68,01,501
1937	6,04,70,594	6,00,918	98,68,232

Total Claims Paid Between 1909 and 1937—Rs. 50,22,576.

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8248.]

13

Bombay Life Building Udipi	Gautam Nivas Charni Road Girgaum. Bombay 4	Visweswarapuram Circle, Bangalore City	Puthiyara. Calicut	Car Street, Mangalore	Ottapalam S. Malabar.	Central Station Road Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Paid up Capital .... Rs. 3,03,205/-
Reserves .... ,, 3,88,842/-

Our Deposit Rates.

3 months	2½% p. a.
6 or 9 months	3 % p. a.
12 months	3½% p. a.
SHORT TERM	2 % p. a.

Head Office: UDIPI, S. K.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8. Virarajendrapet, 8. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-48

V. R. Kamath, B. A., LL. B.,
Manager.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

	ರೂ.	ಆ.	ಪೈ.
ಶೇರ್ ಬಂಡವಾಳ	– 50,000	0	0
ವಸೂಲಾದ ಶೇರ್ ಮೊಬಲಗು	– 45,770	0	0
ಜಮೂಬಂದ ಠೇವಣಾತಿ	– 2,45,269	2	4
ವಸೂಲಾದ ಕ್ಷೇಮನಿಧಿ	– 1,36,696	8	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	– 19,598	4	11
ತ್ರಿಪ್ಟ್ ಡಿಪಾಜಿಟ್ಟು	– 34,431	6	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:—ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-10-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂ ಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-23

The Agricultural &
Industrial Bank Ltd

ಝುಂಡೂರವರ	"ZANDU" ಝುಂಡೂರ್ವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಚೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝುಂಡೂ ಅಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝುಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52-13)

ವೀರಾಜಪೇಟೆಯ ಏಜೆಂಟರು-ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಧಾತುಪುಷ್ಟಿ ಲೇಹ.

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನತೆಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾನಸ್ಥೆ, ಶರೀರದ ಉಷ್ಣತೆ, ಧಾತು ಪರಿತ್ರಿ, ಮೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಹೊಳಕ್ಯಾರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ.

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜ—ಇತ್ಯಾದಿ ನಾನಾ ತರದ ಜ್ವರಗಳಿಗೆ ವೈಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಾಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಸ್ಚರ್.

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಆಮಶಂಕೆ, ತಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟು ಮಾಡುವುದು. ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ.

ಮಕ್ಕಳಚೇಷ್ಟ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುಡುಗುಡು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಲೆ ಸಂಗತಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ಪಿ. ಬಿ. ಕಾಮತ್, ಮಡಿಕೇರಿ. (3) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (4) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (5) ಸುಂದರ್ ಪ್ರಭು, ಸುಳ್ಯ. (6) ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (7) ಎ. ಎನ್. ಹುಚ್ಚಯ್ಯ, ಗೋಣಿಕೊಪ್ಪಲು. [18]

ವಿವಿಧ ವಿಚಾರ.

ಸಿಡಿತದ ಸಿಗರೇಟು ಸೇದಿ ಸತ್ತ!

ಫ್ರೆಂಚ್ ಸ್ಟೇಟ್ ಸಿಗರೇಟ್ ಕಂಪೆನಿಯ ಸಿಗರೇಟ್ ಒಂದನ್ನು ತನ್ನ ಗಂಡನು ಈಗ್ಯೆ 4 ವರ್ಷಗಳ ಹಿಂದೆ ಸೇದಲು ಅದು ಸಿಡಿದು ಆತನು ಸಾಯಲು, ಆತನ ಹೆಂಡತಿಯೂದ ಮೇಡಮ್ ಗ್ಯಾರ್ನರ್ಸ್ ಎಂಬುವಳು ಈಗ ಆ ಕಂಪೆನಿಯ ಮೇಲೆ 1000 ಪೌಂಡುಗಳ ಪರಿಹಾರ ದ್ರವ್ಯಕ್ಕೆ ವ್ಯವಹಾರ ಹೂಡಿದೆ.

—೦೦—

ಹ್ಯಾಗಿದೆ ಬ್ರಿಟಿಷ್ ಪ್ರಧಾನರ ಪುಣ್ಯ?

ಕೆಲವು ದಿನಗಳ ಹಿಂದೆ ಬ್ರಿಟನ್ನಿನ ಪ್ರಧಾನ ಆಮಾತ್ಯರಾದ ನೆವಿಲ್ ಛೇಂಬರ್ಲೇನರು ಹರ್ ಹಿಟ್ಲರರ ಸಂದರ್ಶನಕ್ಕಾಗಿ ಬರ್ಚ್ಟಿಟಿಸ್‌ಗೇಡನ್‌ಗೆ ದಯಮಾಡಿಸಿದ್ದಾಗ ಹಿಟ್ಲರರು ಛೇಂಬರ್ಲೇನರಿಗೆ ಒಂದು ಚುಟ್ಟಾವನ್ನು ಸೇದಲು ಕೊಟ್ಟುದಲ್ಲದೇ ತನ್ನ ಎದುರಿಗೇ ಸೇದಲು ಅನುಮತಿ ಕೊಟ್ಟರಂತೆ! ಹ್ಯಾಗಿದೆ?

ಹಿಟ್ಲರರು ತಾವು ಸೇದುವ ಅಭ್ಯಾಸ ವಿಟ್ಟುಕೊಂಡಿಲ್ಲ ಮತ್ತು ತನ್ನ ಸಹ ಪಾಠಿಗಳೂ ಅವರ ಎದುರಿಗೆ ಸೇದಲು ಅನುಮತಿ ಕೊಡುತ್ತಿರಲಿಲ್ಲ.

ಆದರೆ ಛೇಂಬರ್ಲೇನರಿಗೆ ಮಾತ್ರ ಈ ಅನುಮತಿಯು ದೊರೆತಿದ್ದು ಅವರ ಪುಣ್ಯ ವಿಶೇಷವೇ ಸರಿ!

—೦೦—

ಈಗಿನ ವಿಜ್ಞಾನ ಶಾಸ್ತ್ರಕ್ಕೆ ಅಡಿಗಲ್ಲು ಯಾವದು?

ಅಥರ್ವ ವೇದದಲ್ಲಿ ಹೇಳಲ್ಪಟ್ಟ ಶ್ಲೋಕಗಳನ್ನು ಆಧಾರಪಡಿಸಿಕೊಂಡು, ಒಂದು ಅಪೂರ್ವವಾದ ಯುದ್ಧದ ಸಾಧನವನ್ನು ತಯಾರಿಸಬಹುದಾಗಿದೆ ಅಮಿತವಾಗಿ ವಿಷವಾಯುವನ್ನು ಕಲ್ಪಿಸಿ ಶತ್ರು ಸೈನಿಗಳ ಮೇಲೆ ಮೋಡಗಳಾಗಿ ಮಾಡಿ ಆ ಮೂಲಕ ಅಗ್ನಿ ವರ್ಷವನ್ನು ಸುರಿಸಿ, ಅವರನ್ನೆಲ್ಲಾ ಕೊಲ್ಲಬಹುದಾಗಿದೆ.

ಈ ರಹಸ್ಯಗಳನ್ನೆಲ್ಲಾ ಅಥರ್ವ ವೇದದಿಂದ ಸಂಗ್ರಹಿಸಿ, ಇವುಗಳಿಗೆ ಸವಿವರಣೆಯಿಂದ ವ್ಯಾಖ್ಯಾನ ಬರೆದ ಒಬ್ಬ ಭಾರತೀಯರು ಪ್ರಕಟಣೆ ಬಗ್ಗೆ ಅಪ್ಪಣೆಯನ್ನು ಕೇಳಿದಲ್ಲಿ ಕೊಡಲಿಲ್ಲವಂತೆ!

ಶ್ರೀ ಡಾಕ್ಟರ್ ರಾಜಾ ದೇವಿ ಪ್ರಸಾದ ಮಿಶ್ರಾ ಎಂಬವರು ಈ ವಿಷಯವಾಗಿ ಮಾಡಿದ ಮಹತ್ತರವಾಗಿ ಪರಿಶೋಧನೆ ಮಾಡಿದ್ದಾರೆ ಬೊಂಬಾಯಿ ನಗರದಲ್ಲಿ ಮಣ್ಣು, ಪೊಟಾಷಿಯಂ ಕ್ಲೋರೈಡ್, ಹಾಲೂ ಸೇರಿಸಿ ಊಟ ಮಾಡಿದರು. ಆರು ತಿಂಗಳು ಕಾಲ ಇದೇ ಆಹಾರ ಸೇವನೆ ಮಾಡಿ ಜೀವಿಸಿದ್ದಾರೆ.

ಅಮೇರಿಕದ ಸಂಯುಕ್ತ ರಾಜ್ಯಕ್ಕೆ ಹೋಗಿ ಅಲ್ಲಿ ಎಲ್ಲರ ಮುಂದೆ ತಮ್ಮ ದೇಹವನ್ನು ಸುಡಿಸಿಕೊಂಡು, ಪರಕಾಯ ಪ್ರವೇಶದಿಂದ ಬೇರೊಂದು ಶರೀರಕ್ಕೆ ಪ್ರವೇಶಿಸಿ ಪುನಃ ಭಾರತ ದೇಶಕ್ಕೆ ಬರುವರಂತೆ! ಇದಲ್ಲವೆ ನಮ್ಮ ಪೂರ್ವಯುಗದ ಮಂತ್ರ ವಿದ್ಯೆ!

—೦೦—

ಹಲ್ಲಿನ ಮೇಲೆ ಜಪ್ತಿ.

ನ್ಯೂ ಯಾರ್ಕಿನ ಬಫ್ಫೆಲೋ ಎಂಬಲ್ಲಿನ ನೀಗ್ರೋವೊಬ್ಬನ ಎರಡು ಹಲ್ಲುಗಳು ವಜ್ರದಿಂದ ಕಟ್ಟಲ್ಪಟ್ಟವುಗಳು. ಈತನ ಹೆಸರು–ರೋಬರ್ಟ್ ಆಶ್ಬೀ. ಸಾಲಗಾರರು ತನಗೆ ಬರತಕ್ಕ ನೂರು ಪವನುಗಳಿಗಾಗಿ ದಾವೆ ಹೂಡಿ, ಆತನ ವಜ್ರದ ಹಲ್ಲುಗಳನ್ನು ಜಪ್ತಿ ('ಎಟೇಚ್') ಮಾಡಿಸಬೇಕೆಂದು ಕೇಳಿಕೊಂಡರು. ಆಹರೆ ಮ್ಯಾಜಿಸ್ಟ್ರೇಟರು 'ಅದು ಆತನ ದೇಹಕ್ಕೆ ಸಂಬಂಧಿಸಿದುದಾದುದರಿಂದ, ಸಾಧ್ಯವಿಲ್ಲ'ವೆಂದರು.

—೦೦—

ಪಂಥ.

ಯುಗೋಸ್ಲಾವಿಯದ ಪಾಂಛೇವೊ ಎಂಬ ಹಳ್ಳಿಯಲ್ಲಿ, ಕೆಲಸಗಾರನೊಬ್ಬನು ತನ್ನ ಧನಿಯ ಹಂದಿಯನ್ನು ನೋಡಿದನು. ಅದು ಇಂದು ನಾಳೆಯೋ ಎಂಬಂತೆ ಮರಿಯಿಕ್ಕುವುದರಲ್ಲಿದ್ದಿತು. ಧನಿಯು 'ಈ ಹಂದಿ ನಾಲ್ಕು ಮರಿಗಳನ್ನಿಡಬಹುದು' ಎನ್ನಲು, ಕೆಲಸಗಾರನು 'ಅದು 5 ಕ್ಕಿಂತ ಹೆಚ್ಚಿಗೆ ಮರಿ ಹಾಕುವುದು. ಹಾಗಿದ್ದರೆ 5 ಕ್ಕಿಂತೆ ಹೆಚ್ಚಿನದೆಲ್ಲವನ್ನೂ ನನಗೆ ಕೊಡುವಿರಾ?' ಎಂದ. ಧನಿ ಒಪ್ಪಿದ. ಹಂದಿ ಹನ್ನೆರಡು ಮರಿಗಳನ್ನಿಕ್ಕಿತು. 7 ಕೆಲಸಗಾರನಿಗೆ ಸಂದುವು. ಮತ್ತೊಂದು ದಿನ, ಅದೇ ಕೆಲಸಗಾರನ ಹೆಂಡತಿ ಬಸಿರಾಗಿರುವಳೆಂದು ತಿಳಿದು ಬಂದು, ಧನಿ ಆಳಿನೊಡನೆ ಪಂಥ ಹಾಕಿದ. ಕೆಲಸಗಾರನ ಮಡದಿ ಎರಡು ಮಕ್ಕಳನ್ನು ಹೆತ್ತುದರಿಂದ, ಒಂದು ಧನಿಗೆ ಸೇರಿತು. ಆತನು ಆ ಮಗುವನ್ನು ದತ್ತು ಸ್ವೀಕಾರ ಮಾಡಿರುವನು. ಹೇಗಿದೆ ಪಂಥ! ಒಂದು ಮಗುವಿನ ಬೆಲೆ 7 ಹಂದಿ ಮರಿಗಳೆ?

—೦೦—

ಸಸ್ಯಗಳಿಗೆ ನಿದ್ರೆ ಬೇಕಂತೆ!

ಮನುಷ್ಯರಂತೆಯೇ ಸಸ್ಯಗಳಿಗೆ ಕೂಡಾ ಧಾರಾಳ ನಿದ್ರೆಯು ಬೇಕಾಗಿದೆಯೆಂಬುದನ್ನು ಜೋಹನ್‌ಸನ್ ಎಂಬವನು ಕಾರ್ಯತಃ ಸ್ಪಷ್ಟಪಡಿಸಿದ್ದಾನೆ.

ಸ್ಕೇಂಡಿನೇವಿಯದ ಈ ಮಹಾನ್ ಭಾವನು ಸಸ್ಯಗಳ ವಿಶ್ರಾಂತಿಯ ರಹಸ್ಯವನ್ನರಿತು ಕೆಲವು ಹೂ ಗಿಡಗಳ ಬೇರುಗಳನ್ನು ಬಿಸಿನೀರಿನ ಕೊಳವೆಯ ಬದಿಯಲ್ಲಿಟ್ಟನಂತೆ. ಮರುದಿನ ಹೂಗಳು ಬಹಳ ಸುಂದರವಾಗಿದ್ದುವಂತೆ. ನಿದ್ರೆ ಮಾಡಲು ಬೆಚ್ಚಗಿರುವ ನೆಲವೇ ಸಸ್ಯಗಳಿಗೆ ಅವಶ್ಯವೆಂದು ಜೋಹನ್‌ಸನನಿಗೆ ಆಗ ಸ್ಪಷ್ಟವಾಯಿತು.

ಅವನ ಮಹತ್ವದ ಶೋಧವೆಂದರೆ ಬೇರುಗಳಿಗೆ ನಿದ್ರೆ ಬರಿಸುವ ಕ್ಲೋರೊಫಾರ್ಮನ್ನು ಕೊಡುವುದಾಗಿದೆ. ಒಂದು ಹೂ ಗಿಡದ ಗಡ್ಡೆಯನ್ನು ಕ್ಲೋರೊಫಾರ್ಮಿನಲ್ಲಿಟ್ಟು ನೋಡಿದಾಗ ಅವುಗಳು ಎಂದಿಗಿಂತ ಬೇಗನೆ ಮತ್ತು ಹೆಚ್ಚು ಹೂ ಬಿಟ್ಟವು.

—೦೦—

ಮೂಢ ನಂಬಿಕೆ.

ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೌ ರವರು ಭಾರತದ ರಾಜಧಾನಿಯಾಗಿರುವ ದೆಹಲಿಯನ್ನು ಬಿಟ್ಟು ಬೇರೆ ಯಾವುದಾದರೂ ಒಂದು ಊರನ್ನು ರಾಜಧಾನಿಯನ್ನಾಗಿ ಮಾಡಿಕೊಳ್ಳುವರೆಂದು ಸುದ್ದಿ ಹರಡಿದೆ. ಇದಕ್ಕೆ ರಾಜಕೀಯವೇ ಆಗಲಿ, ಆಡಳಿತವೇ ಆಗಲಿ, ಕಾರಣವಲ್ಲವಂತೆ. ಹಿಂದೆ ಎಷ್ಟೋ ಚಕ್ರಾಧಿಪತ್ಯಗಳು, ದೆಹಲಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಒಂದಲ್ಲ ಒಂದು ದಿನ ನಾಶಹೊಂದಿದವು. ಆದರಂತೆಯೇ ಬ್ರಿಟಿಷ್ ಚಕ್ರಾಧಿಪತ್ಯವೂ ಆಗಬಹುದೋ ಏನೋ! ಎಂಬ ಶಂಖೆಯಿಂದ ಈಗ ದೆಹಲಿಯಿಂದ ವೈಸರಾಯರು ತಮ್ಮ ರಾಜಧಾನಿಯನ್ನು ಮತ್ತೆ ಯಾವುದಾದರೂ ಪರ ಊರಿಗೆ ಬದಲಾಯಿಸಬಹುದೆಂದು ಹೇಳಲಾಗಿದೆ. ಇದು ಮೂಢ ನಂಬಿಕೆಯಲ್ಲದೆ ಮತ್ತೇನು?

—೦೦—

ಜೇಬಿನಲ್ಲಿಟ್ಟುಕೊಳ್ಳಬಹುದಾದ ಸೂರ್ಯ!

ಕಾಲವು ಯಾವ ರೀತಿಯಲ್ಲಿ ಮುಂಚಿನೋಪಾದಿಯಲ್ಲಿ ಓಡುತ್ತಿದೆಯೋ ಅದೇ ರೀತಿ ವಿಜ್ಞಾನ ಪ್ರಪಂಚವೂ ಓಡುತ್ತಿದೆಯೆನ್ನಬಹುದು. ಸೂರ್ಯನಿಗಾಗಿ ನಾವು ಈಗೆ ಕಾಯಬೇಕಾಗಿಲ್ಲ. ನಾವುಗಳು ನಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಹುದಾದ ಯಂತ್ರವೊಂದನ್ನು ಅಮೇರಿಕದ ವಿದ್ಯುಚ್ಛಕ್ತಿ ಇಂಜಿನಿಯರುಗಳು ಕಂಡು ಹಿಡಿದಿರುವರು. ಸೂರ್ಯನ ಪ್ರಕಾಶದ ಐನನೇ ಒಂದು ಭಾಗದಷ್ಟು ಪ್ರಕಾಶವನೀವಾಗಿದೆ ಈ ಯಂತ್ರ ಕೊಡುವ ಬೆಳಕು. ಬೆಣಚು ಕಲ್ಲಿನಿಂದ (ಬೆಳ್ಳಿಯಲ್ಲು) ಮಾಡಲ್ಪಟ್ಟ ಒಂದು ಕೊಳವೆಯೊಳಗೆ ಪಾದರಸದ ಒಂದು ವರ್ತುಳಾಕಾರದ ಭಾಗವಿದ್ದು ಅದರ ಮೂಲಕ ಬರುವ ಕಿರಣಗಳನ್ನು ಕೇಂದ್ರೀಕರಿಸಿ ಪ್ರಕಾಶವನ್ನುಂಟುಮಾಡುವ ದೀಪವದು.

ಈ ಬೆಣಚುಕಲ್ಲಿನ ಕೊಳವೆಯು ಅತ್ಯುನ್ನತಕಾವಿನ ಶಕ್ತಿ ಪಡೆದಿದ್ದಾಗ್ಗೂ ಅದರ ಸುತ್ತ ತಣ್ಣನೆಯ ವಸ್ತುವನ್ನು ಇಟ್ಟಿರಲಾಗುವುದು. ಇದರಿಂದ ರಕ್ಷಣೆಯ ದೊರೆತಂತಾಗುವುದು. ಪ್ರತಿ ಮೂರು ನಿಮಿಷಗಳಿಗೊಂದಾವರ್ತಿ ತಣ್ಣೀರಿನ ತಂಪನ್ನು ಕೊಡಬೇಕಾಗುತ್ತದೆ. ಈ ದೀಪವು ಸಾಧಾರಣ ದೀಪಗಳ 12 ರಷ್ಟು ಹೆಚ್ಚಿಗೆ ಪ್ರಕಾಶವಾಗಿರುವುದಲ್ಲದೆ 1200 'ಕ್ಯಾಂಡಲ್ ಪವರ್' ನಷ್ಟು ಪ್ರಕಾಶವಾಗಿಯೂ ಇರುವುದು. ಆದರೆ ಇದರ ಉಷ್ಣವು ಮನುಷ್ಯನ ಕೈ ಬೆರಳುಗಳಷ್ಟು ಮಾತ್ರವೇ ಇದ್ದು ಪ್ರಕಾಶಮಾನವಾದ ಬಿಳಿಯ ಬೆಳಕನ್ನೇ ಕೊಡುವುದಾಗಿದೆಯಂತೆ!

—೦೦—

ಹಸುಗಳಿಗೆ ಕೃತಕ ಹಲ್ಲು.

ಹಸುಗಳಿಗೆ ಕೆಲವು ಹಲ್ಲುಗಳಲ್ಲಿ ಹುಳುಗಳು ಸೇರಿ ಆ ಮೂಳಕ ರೋಗಕ್ಕೆ ಗುರಿಯಾಗುವುದಲ್ಲದೆ ಅವುಗಳು ಮೇವನ್ನು ಸಹ ತಿನ್ನಲಾರದವಾಗುವುವು. ಆದ ಪ್ರಯುಕ್ತ ರಷ್ಯದ ಜಿಲ್ಲೆಗಳಲ್ಲೊಂದಾದ ಓರೋಷಿಲ್ಸ್ಕೋಗ್ರಾಡ್ ಎಂಬಲ್ಲಿ ಈಗ ಒಂದು ತರಹ ಲೋಹದ ಹಸುಗಳ ಹಲ್ಲುಗಳನ್ನು ಕಂಡು ಹಿಡಿದಿರುವರು. ಇದರ ಸಹಾಯದಿಂದ ಹಸುಗಳು ಆಹಾರ ಸ್ವೀಕರಿಸಬಲ್ಲವೆಂದು ಕಂಡು ಬಂದಿದೆ.

—೦೦—

6 ಶತಮಾನಗಳ ಪ್ರಾಚೀನ ಬಾವಿ.

ಪುರಾತನ ಪ್ರಸಿದ್ಧವಾದ ಬಾವಿಯೊಂದರ ಚರಿತ್ರೆಯಿದು. ಇಟಲಿಯಲ್ಲೆಲ್ಲಾ ಪ್ರಸಿದ್ಧವಾದ ಗೋಪುರಗಳ ನಗರವೆಂದು ಪ್ರಖ್ಯಾತವಾದ ಸಾನ್‌ಗಿಮಿನ್ನಾನೋ ಎಂಬ ಊರಿನಲ್ಲಿ ಒಂದು ಪುರಾತನ ಬಾವಿಯಿದೆ. ಈ ಬಾವಿಯು ಸುಮಾರು 1373 ರಲ್ಲಿ ತೋಡಲಾಯಿತೆಂದೂ, ಜನರು ಅದರಿಂದೀಚೆಗೆ ಒಂದೇ ಸಮನೆ ನೀರು ಸೇದುತ್ತಿದ್ದರೂ ಯಾವತ್ತೂ ನೀರು ಕಡಿಮೆಯಾಗಿಲ್ಲವೆಂದು ಹೇಳಲಾಗಿದೆ. ಕಟ್ಟಿಸಿದರೆ ಇಂಥಾ ಬಾವಿಯನ್ನು ಕಟ್ಟಿಸಬೇಕು; ಮತ್ತು ಕಟ್ಟಿಸುವವರ ಮನಸ್ಸೂ ಅವರಂತೆಯೇ ಇರಬೇಕು ಹೇಳಿ.'

—೦೦—

ಮೂರು ಆಣೆಗೆ ಮಳೆ.

ಪ್ರಪಂಚದ ಅನೇಕ ಭಾಗಗಳಲ್ಲಿ ಮಳೆ ಬಾರದೆ ರೈತರು ಬಹಳ ನಷ್ಟ ಹೊಂದುತ್ತಾರೆ. ಆದೇ ರೀತಿ ಹಂಗೇರಿಯಲ್ಲಿಯೂ ಕೆಲವು ವೇಳೆ ಮಳೆ ಇಲ್ಲದೆ ಜನರು ಕಷ್ಟಕ್ಕೀಡಾಗುತ್ತಾರೆ. ಈಗ ಅತ್ಯಲ್ಪ ವೆಚ್ಚದಿಂದ ಕೃತಕ ಮಳೆ ಬರುವಂತೆ ಮಾಡಬಹುದೆಂದು ಹಂಗೇರಿಯ ಇಬ್ಬರು ವೈಜ್ಞಾನಿಕರು ತಿಳಿಸುತ್ತಾರೆಂದು ರಂಗೂನ್ ಗೆಜೆಟಿನ ಬಾತ್ಮಿದಾರರೊಬ್ಬರು ಬರೆದಿರುವರು.

ಪ್ರಚಂಡ ಬೆಂಕಿಯಿಂದಲೂ ಅಥವಾ ಜ್ವಾಲಾಮುಖಿಯು ಉರಿಯುತ್ತಿದ್ದರೆ ಅಲ್ಲಿಯೂ ಮಳೆ ಉಂಟಾಗುವುದು ಕಂಡು ಬರುತ್ತದೆ. ಇದರಿಂದ ಬೆಂಕಿ ವಿಶೇಷವಾಗಿ ಉರಿದಲ್ಲಿ ಮಳೆ ಬರುತ್ತದೆಂದು ಮೇಲಿನ ವಿಜ್ಞಾನಿಗಳ ಅಭಿಮತ ಇದರಿಂದ ಅವರು ಈ ಅಭಿಪ್ರಾಯ ಮಾಡಿದ್ದಾರೆ; ಚೆಂಕಿಯನ್ನು, ಒಂದು ಸರೋವರದ, ನದಿಯ ಅಥವಾ ಕಾಲುವೆಯ ನೀರಿನ ಮೇಲ್ಭಾಗದಲ್ಲಿ ಉರಿಯುವಂತೆ ಮಾಡುವುದರಿಂದ ಮಳೆ ಬರುತ್ತದೆಂದು ತಿಳಿಸಿದ್ದಾರೆ. ಈಗ ಇವರ ಸೂಚನೆಯ ಮೇರೆಗೆ ಶೋಧಗಳು ನಡೆಯುತ್ತಿವೆಯಂತೆ. ಒಂದು ಎಕ್ರೆ ಭೂಮಿಗೆ ಬೇಕಾದಷ್ಟು ಮಳೆ ಬರುವಂತೆ ಮಾಡಲು 2¾ ಪೆನ್ನಿ [ಆಣೆಗಳು] ಗಳಷ್ಟು ಬೇಕಾಗಬಹುದಂತೆ. ಇದು ಜಾರಿಗೆ ಬಂದರೆ 1 ಶಿಲಿಂಗಿಗೆ ಅನೇಕ ಬಾರಿ ಮಳೆ ಬರುವಂತೆ ಮಾಡಬಹುದು. ಈಗ ಹಂಗೇರಿಯ ರೈತರು ತೆರುವ 25 ಶಿಲಿಂಗುಗಳ ಕರವು ರೈತರಿಗೇನೇ ಉಳಿಯುವುದು. ಈ ಯೋಜನೆಯು ಕೊಡಗಿಗೆ ಬಂದಿದ್ದರೆ ಉಪಕಾರವಿತ್ತಲ್ಲನೇ?

—೦೦—

ಕೌನ್ಸಿಲು ಮಾಟಿಂಗು.

ಸಂಯುಕ್ತ ರಾಜ್ಯ ಘಟನೆಗೆ ತೀವ್ರ ವಿರೋಧ.

ಭೂಮಿ ಅಡಮಾನ್ ಬ್ಯಾಂಕ್ ಸ್ಥಾಪಿಸಲು ಸರ್ಕಾರಕ್ಕೆ ಅಸಾಧ್ಯ.
ಸಂತೆ ದಿನಗಳಲ್ಲಿ ಸೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ಮುಚ್ಚಬೇಕು.
ಶಾಲಾ ಪಠ್ಯ ಪುಸ್ತಕಗಳನ್ನು ಆರಿಸಲು ಕಮಿಟಿಯು ನೇಮಕವಾಗಬೇಕು.

ತರಾವುಗಳು.

6. '1935ನೇ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನ ಮೇರೆ ಜಾರಿಯಲ್ಲಿ ಬ ರುತಕ್ಕ ಸಂಯುಕ್ತ ರಾಜ್ಯ ಘಟನೆಯ ಪ್ರೋಜನೆಗಿರುವ ವಿರೋಧವನ್ನು ಮತ್ತು ಭಾರತದ ಭವಿತವ್ಯವನ್ನು ನಿರ್ಣಯಿಸುವ ಒಂದು ಮೂಲ ಭೂತ ಸಂಸ್ಥೆಯನ್ನು ಏರ್ಪಡಿಸಲು ಒಡನೆ ತಕ್ಕ ಕ್ರಮಗಳನ್ನು ತೆಗೆಯಲು ಸೂಚನೆಮಾಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ.' ಎಂಬ ತರಾವನ್ನು ಶ್ರೀ ಕೋರನ ದೇವಯ್ಯನವರು ಸೂಚಿಸಿ ಈ ಸಂಯುಕ್ತ ರಾಜ್ಯಘಟನೆಯು ಭಾರತ ವನ್ನು ಇನ್ನೂ ಪಾರತಂತ್ರ್ಯದಲ್ಲಿ ಶಿಲುಕಿ ಸುವಂಥಾದ್ದೆಂದೂ, ಜನಪ್ರತಿನಿಧಿಗಳಿಗೆ ಅ ಲ್ಲಿ ಬಹುಮತವಿಲ್ಲವೆಂದೂ, ಸಂಸ್ಥಾನಗ ಳ ನೇಮಿತ ಮೆಂಬರರಿಂದ ಕೂಡಿದ ಇದ ರಲ್ಲಿ ಒಗ್ಗಟ್ಟು ತಪ್ಪಿ ದೇಶದಲ್ಲಿ ಕ್ಷೋಭೆ ಯುಂಟಾಗಬಹುದೆಂದೂ, ಅಖಿಲ ಭಾರ ತ ಕಾಂಗ್ರೆಸ್ ಮಾತ್ರವಲ್ಲ, ಭಾರತದ ಮು ಸ್ಲಿಂ ಲೀಗ್ ಸಹ ಇದನ್ನು ವಿರೋಧಿಸಿರು ವುದೆಂದೂ, ಆದ್ದರಿಂದ ಈ ಘಟನೆಯಿಂದ ಜನಹಿತವನ್ನು ಬಯಸುವದು ಅಸಾಧ್ಯ ವೆಂದೂ ಹೇಳಿದರು.

ಶ್ರೀ ಪಿ. ಜಿ. ಮುದ್ದಮ್ಮಯ್ಯನವರು ಅನುಮೋದಿಸಿದರು.

ಫೈನಾನ್ಸು ಮೆಂಬರು ತರಾವನ್ನು ವಿರೋಧಿಸುತ್ತಾ ಫೆಡರೇಶನ್ ಯೋಜನೆಯನ್ನು ವಿರೋಧಿಸಲು ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟನ್ನೇ ತಿದ್ದುಪಡಿ ಮಾಡಬೇಕೆಂದೂ, ಇದನ್ನು ವಿರೋಧಿಸು ವದರಿಂದ ಈ ಘಟನಾ ಸಮಿತಿಯಲ್ಲಿ ಕೊ ಡಗಿಗಿರುವ ಒಂದು ಸ್ಥಳವನ್ನೂ ಕಳಕೊ ಳ್ಳಬೇಕಾಗುವದೆಂದೂ ಹೇಳಿದರು.

ಶ್ರೀ ಪಿ. ಐ. ಬೆಳ್ಯಪ್ಪನವರು ತರಾವ ನ್ನು ಪುಷ್ಟೀಕರಿಸುತ್ತಾ, ಫೆಡರೇಶನು ಪ್ರ ಜಾ ಪ್ರತಿನಿಧಿಗಳ ಸಭೆಯಲ್ಲವೆಂದೂ, ಅ ದಕ್ಕೆ ಆರ್ಥಿಕ ನೈವಾಟನ ಮೇಲೆ ಅಧಿಕಾ ರವಿಲ್ಲೆಂದೂ, ಏಳು ಕಾಂಗ್ರೆಸು ಪ್ರಾಂತಗ ಳು ಇದನ್ನು ವಿರೋಧಿಸಿವೆಯೆಂದೂ, ರಾ ಜ್ಯಘಟನೆಯು ಯೋಜನೆಯಲ್ಲಿ ನಮಗಿರು ವ ಸ್ಥಾನವು ಹೋದರೂ ನಾವು ಚಳವಳ ಮಾಡಿಸಿ ಇವಕ್ಕಿಂತ ಉಪಯೋಗಕರವಾದ ಪ್ರೋಜನೆಯನ್ನು ಪಡೆಯುವೆನೆಂದೂ ಹೇಳಿದರು.

ಶ್ರೀ ದೇವಯ್ಯನವರು ಉತ್ತರವಿತ್ತ ಮೇಲೆ ತರಾವನ್ನು ಓಟಿಗೆ ಹಾಕಲಾಗಿ ಚುನಾಯಿತ ಮೆಂಬರುಗಳೆಲ್ಲರು ಪರವಾ ಗಿಯೂ, ಉದ್ಯೋಗಸ್ಥ ಮೆಂಬರರು, ನೇ ಮಕ ಮತ್ತು ಯೂರೋಪಿಯನ್ ಮೆಂಬ ರು ವಿರೋಧವಾಗಿಯೂ ಓಟು ಮಾಡಿ ದರು. ತರಾವು ಪಾಸಾಯಿತು.

7. 'ವೀರಾಜಪೇಟೆ ಹುಡುಗಿಯರ ಪ್ರೈಮರಿ ಶಾಲೆಯನ್ನು ಲೋವರ್ ಸೆಕೆಂಡ ಸ್ಕೂಲಿನ ಮಟ್ಟಕ್ಕೆ ತರಬೇಕೆಂದು ಈ ಸ ಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ತರಾವನ್ನು ಶ್ರೀ ಐ. ಟಿ. ಕಾರ್ಯಪ್ಪನವರು ಸಭೆಯ ಮುಂದಿಟ್ಟು, ಪ್ರತಿಯೊಂದು ಜನಾಂಗದ ಅಭಿವೃದ್ಧಿಗೆ ಶ್ರೀ ವಿದ್ಯಾಭ್ಯಾಸವು ಸಹಕಾರಿಯೆಂದೂ, ಶಾಲೆಯಲ್ಲಿ ಆವರಿಗೆ ಗಹಕತ.. ಶಿಕ್ಷಣ

ರಕ್ಷಣೆ, ಮೊದಲಾದ ಪ್ರಾಮುಖ್ಯ ವಿಚಾ ರಗಳನ್ನು ಕಲಿಸಬೇಕೆಂದೂ, ಸಿಬ್ಬಂದಿ ಪೋತೆಯ ನೆವದಿಂದ ಶಾಲೆಯನ್ನು ತೆಗೆ ದು ಹಾಕುವುದು, ಅಲ್ಪ ಲಾಭಕ್ಕಾಗಿ ಅ ಮಿತ ಸೌಲಭ್ಯವನ್ನು ಹಾಳುಮಾಡಿದಂ ತಾಗುವದೆಂದೂ, ಹುಡುಗರ ಶಾಲೆಗೆ ಹು ಡುಗಿಯರನ್ನು ಕಳಿಸಿದೆ ತಾಯಿಗಳು ಕಳು ಹಿಸುವುದು ಕಮ್ಮಿಯೆಂದೂ, ದಕ್ಷಿಣ ಕೊಡಗಿನ ಸ್ತ್ರೀ ವಿದ್ಯಾಭ್ಯಾಸವು ಈ ಶಾಲೆ ಯ ಮೇಲೆ ಹೊಂದಿಕೊಂಡಿದೆಯೆಂದೂ, ಎಲ್ಲರೂ ಈ ಶಾಲೆಯು ಹೈಸ್ಕೂಲಾಗಿ ಮೂರ್ಪಡಬಹುದೆಂಬ ಆಶೆಯಿಂದಿರುವಾಗ ಸದ್ಯಕ್ಕೆ ಇರುವ ಶಾಲೆಯನ್ನೇ ತೆಗೆದು ಹಾಕುವದು ಹಿತವೆನಿಸದೆಂದರು.

ಶಾಲಾ ಇನ್ಸ್‌ಪೆಕ್ಟರರು ತರಾವನ್ನು ವಿರೋಧಿಸಿ, ಹುಡುಗಿಯರ ಶಾಲೆಗಳು ಸ ರಿಯಾಗಿ ಕೆಲಸ ಮಾಡದಿರುವದರಿಂದ ಎ ಲ್ಲಾ ಹುಡುಗಿಯರ ಶಾಲೆಗಳೂ ತೆಗೆಯ ಲ್ಪಡಬೇಕೆಂದೂ, ಈ ಶಾಲೆಗಳನ್ನು ಹು ಡುಗರ ಶಾಲೆಯೊಂದಿಗೆ ಸಂಯೋಜಿಸಿದರೆ ಶಾಲೆಗೆ ಬರುವ ಹುಡುಗಿಯರ ಸಂಖ್ಯೆ ಯು ಕಡಿಮೆಯಾಗುವದಿಲ್ಲವೆಂದೂ ಹೇ ಳಿದರು.

ಶ್ರೀ ಪಿ. ಐ. ಬೆಳ್ಯಪ್ಪನವರು ಹುಡು ಡುಗರ ಮತ್ತು ಹುಡುಗಿಯರ ಶಾಲೆಗಳ ನ್ನು ಒಂದು ಮೂಡುವುದು ಯೋಗ್ಯ ತತ್ವ ವಲ್ಲವೆಂದೂ, ಇದರಿಂದ ಹುಡುಗಿಯರ ಸಂಖ್ಯೆಯು ಖಂಡಿತಾ ಕಮ್ಮಿಯಾಗುವದೆಂ ದೂ, ಎಲ್ಲಾ ದೇಶಗಳಲ್ಲಿ ಸ್ತ್ರೀ ವಿದ್ಯಾ ಭ್ಯಾಸವನ್ನು ಪ್ರೋತ್ಸಾಹಿಸುತ್ತಿರುವಾಗ ಇಲ್ಲಿ ಹುಡುಗಿಯರ ಶಾಲೆಗಳನ್ನು ಮು ಚ್ಚುವುದರಿಂದ ಸ್ತ್ರೀ ವಿದ್ಯಾಭ್ಯಾಸನನ್ನು ಪ್ರೋತ್ಸಾಹಿಸಿದಂತಾಗಲಿಲ್ಲವೆಂದೂ, ಇ ದರಿಂದ ವಿದ್ಯಾಭ್ಯಾಸದಲ್ಲಿ ಮುಂದಿರುವ ಕೊಡಗು ಹಿಂದೆ ಬೀಳುವದರಲ್ಲಿ ಸಂಶೇ ಹವಿಲ್ಲವೆಂದೂ ಹೇಳಿ ತರಾವನ್ನು ಸಮ ರ್ಥಿಸಿದರು.

ಶಾಲಾ ಇನ್ಸ್‌ಪೆಕ್ಟರು ಜವಾಬಿತ್ತ ಮೇಲೆ ತರಾವನ್ನು ಓಟಿಗೆ ಹಾಕಲಾಗಿ ಕಾಂಗ್ರೆಸ್ ಮೆಂಬರರು ಪರವಾಗಿಯೂ, ಉದ್ಯೋಗಸ್ಥ ಮೆಂಬರರು ವಿರೋಧವಾಗಿ ಯೂ ಓಟು ಮಾಡಿದರು. ತರಾವು ಮಂ ಜೂರಾಯಿತು. ಬಾಕಿ ಮೆಂಬರರು ಓ ಟು ಮಾಡಲಿಲ್ಲ.

8. 'ಕೌನ್ಸಿಲಿನಲ್ಲಿರುವ ಉದ್ಯೋಗಸ್ಥ ರಲ್ಲದ ಮೆಂಬರುಗಳಿಗೆ ಆವರ ಸದಸ್ಯತನವಿ ರುವ ವರೆಗೆ ಕೊಡಗು ಗಜೆಟನ್ನು ಮುಫ ತ್ತಾಗಿ ಕೊಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡು ತ್ತದೆ.' ಈ ತರಾವನ್ನು ಶ್ರೀ ಐನಂಡ ಕಾ ರ್ಯಪ್ಪನವರು ಸೂಚಿಸಿ, ಸರಕಾರದವರು ಗಜೆಟನ್ನು ಪ್ರಕಟಿಸುವ ಉದ್ದೇಶವು ಆವ ರು ತಿರಸ್ಕರಿಸಿರುವರೆಂದೂ, ಆದ್ದರಿಂ ದ ಇದಕ್ಕೆ ಅವರು ಒಪ್ಪಲಿಕ್ಕಿಲ್ಲವೆಂದೂ ಹೇಳಿದರು.

ಓಟಿಗೆ ಹಾಕಲಾಗಿ ಕಾಂಗ್ರೆಸ್ ಪರ ಮೆಂಬರರಿಲ್ಲದೆ ಎಲ್ಲಾ ಚುನಾಯಿತ ದೇ ಶೀಯ ಮೆಂಬರುಗಳೂ, ಅಬ್ದುಲ್ ರಹ ಮಾನ್ ಖಾನರೂ ಪರವಾಗಿಯೂ, ಯೂರೋಪಿಯನ್ ಚುನಾಯಿತ ಮೆಂ ಬರರಲ್ಲದೆ ಬಾಕಿ ಮೆಂಬರುಗಳು ವಿರೋ ಧವಾಗಿಯೂ ಓಟು ಮಾಡಿದ್ದರಿಂದ ತರಾ ವು ಮಂಜೂರಾಗಲಿಲ್ಲ.

27-10-'38.

ಎರಡನೇ ದಿನ.

10. ಶ್ರೀ ಯಂ. ಯಂ. ಬೆಳ್ಯಪ್ಪನ ವರು 'ನಾಗರ ಹೊಳೆ ರೇಂಜಿನ ಪೂರ್ವ ಭಾಗದ ಸಾರೆಸ್ಟುಗಳನ್ನು ಈಗ ನಿಶ್ಚಯಿಸಿ ರುವಂತೆ ಒಪ್ಪಂದಿಂಡೆ ಕಂಟ್ರಾಕ್ಟು ಕೊ ಡುವದನ್ನು ರದ್ದು ಮಾಡಬೇಕು. ಇದ ರ ಬಗ್ಗೆ ದಕ್ಷಿಣ ಇಂಡಿಯಾದ ಪ್ರಾಮು ಖ್ಯ ಪತ್ರಿಕೆಗಳಲ್ಲಿಯೂ, ಸ್ಥಳೀಯ ಗಜೆಟಿನ ಲ್ಲಿಯೂ ಪ್ರಕಟಣೆಯನ್ನು ಮಾಡಿ ದರಕಾ ಸ್ತುಗಳನ್ನು ತರಿಸುವದಲ್ಲದೆ ಈಗ ಕಡಿದು ಡ್ರೈಸ್ ಮಾಡಿದ ತೊಲೆ ಮರ್ಗಳನ್ನು ಹು ಣಸೂರು ಡಿಪೋವಿಗೆ ಸಾಗಿಸಿ ಇಲಾಖೆ ಯವರು ಮೂರಾಟ ಮಾಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರ ಸ್ಸು ಮಾಡುತ್ತದೆ.' ಎಂಬ ತರಾವನ್ನು ಸೂಚಿಸಿ ಈ ವರೆಗೆ ತೊಲೆ ಮರಗಳು ಫಾ ರೆಸ್ಟು ಇಲಾಖೆಯವರಿಂದ ಮೂರಲ್ಪಡುತಿ ದ್ದವೆಂದೂ, ಈ ವರ್ಷ ಅವರು ಕೂಪ್ (Coup) ಯೋಜನೆಯ ಪ್ರಕಾರ ಕೊಡ ಲು ಪ್ರಯತ್ನಿಸುತ್ತಿರುವರೆಂದೂ, ನಾಗರ ಹೊಳೆ ರೇಂಜಿನಲ್ಲಿ ಕೆಲವು ಸ್ವಂತ ಕಂಟ್ರಾ ಕ್ಟುದಾರರಿಗೆ ಕೊಡಲ್ಪಟ್ಟಿದೆಯೆಂದೂ, ಗ ವರ್ನಮೆಂಟಿನವರು ಪತ್ರಿಕೆಯಲ್ಲಿ ಪ್ರಕ ಟಪಡಿಸಿ ದರಕಾಸ್ತುಗಳನ್ನು ತರಿಸುವ ವಿ ಧಾನಕ್ಕೆ ಒಪ್ಪಿದ್ದರೂ, ಅದಕ್ಕೆ ವ್ಯತಿರಿಕ್ತ ಮಾಡುವುದರಿಂದ ಗವರ್ನಮೆಂಟಿಗೆ ನಷ್ಟ ವಾಗುವದೆಂದೂ ಹೇಳಿದರು.

ಶ್ರೀ. ಎಸ್. ರಾಮಮೂರ್ತಿಯವರು ಅನುಮೋದಿಸಿದರು.

ಫೈನಾನ್ಸು ಮೆಂಬರರು ಇನ್ಸ್‌ಪೆಕ್ಟರ್ ಜನರಲರವರು ಈ ಪ್ರೋಜನೆಗೆ ಶಿಫಾ ರಸ್ಸು ಮಾಡಿರುವರಿಂದೂ, ಈ ಪ್ರೋಜನೆ ಯಿಂದ ಸ್ಥಳೀಯ ಜನರಲ್ಲಿ ವಹಿವಾಟಿಗೆ ಅನುಕೂಲ ಕಲ್ಪಿಸಿದಂತಾಗುವದೆಂದೂ ಹೇಳಿ ತರಾವನ್ನು ವಿರೋಧಿಸಿದರು.

ಶ್ರೀ ಸೋಮಣ್ಣನವರು ಮತ್ತು ಮು ಲ್ಲಪ್ಪನವರು ತರಾವನ್ನು ಪುಷ್ಟೀಕರಿಸಿ ಮಾತಾಡಿದರು.

ಶ್ರೀ ಬಿ. ಯಂ. ಕಾರ್ಯಪ್ಪನವರು ತರಾವನ್ನು ವಿರೋಧಿಸಿದರು.

ಶ್ರೀ ಯಂ. ಯಂ. ಬೆಳ್ಯಪ್ಪನವರು ಉತ್ತರವಿತ್ತ ಮೇಲೆ ತರಾವನ್ನು ಓಟಿಗೆ ಹಾಕಲ್ಪಾಗಿ ಮೂರು ಲಾಯರು ಮೆಂಬ ರುಗಳೂ, ಯಂ. ಯಂ. ಬೆಳ್ಯಪ್ಪನವರು ಮತ್ತು ಚೌಡ್ಲು ಕಾಳಪ್ಪನವರು ಪರವಾಗಿ ಯೂ, ಕೆ. ಯಂ. ದೇವಯ್ಯನವರು ಮತ್ತು ಐ. ಪಿ. ಕಾರ್ಯಪ್ಪನವರಲ್ಲದೆ ಬಾಕಿ ಮೆಂಬರರು ವಿರೋಧವಾಗಿಯೂ ಓಟು ಮಾಡಿದ ರಿಂದ ತರಾವು ಬಿದ್ದು ಹೋಯಿತು.

11. 'ಕ್ಲುಪ್ತ ಸಮಯದ ಕಂದಾಯದ ಪರಿಷ್ಕರಣವು ವಜಾಮಾಡಲ್ಪಡಬೇಕೆಂದು ಈ ಕೌನ್ಸಿಲು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಶ್ರೀ ಯಂ. ಯಂ. ಬೆಳ್ಯಪ್ಪನವರು ಸಭೆಯ ಮುಂದಿಟ್ಟು ಆಗಾಗ್ಯೆ ಈ ರೀತಿಯ ಪರಿಷ್ಕರಣವು ನಡೆಯುವುದರಿಂದ ಜನರಿಗೆ ತೊಂದರೆಯಲ್ಲದೆ, ಇದು ಪೂರ್ತಿಯಾಗಲು ನಾಲ್ಕೈದು ವರ್ಷಗಳಷ್ಟು ಸಮಯ ತೆಗೆದುಕೊಳ್ಳುವುದರಿಂದ ಆರ್ಥಿಕ ನಷ್ಟವಾಗುವದೆಂದು ಮುಂತಾಗಿ ಹೇಳಿದರು. ಶ್ರೀ ಸೋಮಣ್ಣನವರು ಅನುಮೋದಿಸಿದರು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಠರಾವನ್ನು ವಿರೋಧಿಸುತ್ತಾ ಇದು ಸೆಟ್ಲ್‌ಮೆಂಟಿನ ಒಂದು ತತ್ವವೆಂದೂ, ಇದರಿಂದ ಹೊಸ ಭೂಮಿಗಳಿಗೆ ಕಂದಾಯ ಹಾಕುವದಲ್ಲದೆ ಅನಾವಶ್ಯ ಕಂದಾಯ ಕೊಡುವದರಲ್ಲಿ ಕಮ್ಮಿಯಾಗುವದೆಂದೂ, ಇದರಿಂದ ರೈತರಿಗೆ ಪ್ರಯೋಜನವಿದೆಯೆಂದೂ ಹೇಳಿದರು.

ಶ್ರೀ ಪಿ. ಐ. ಬೆಳ್ಯಪ್ಪನವರೂ, ಬಿ. ಯಂ. ಕಾರ್ಯಪ್ಪನವರೂ ಠರಾವನ್ನು ಸಮರ್ಥಿಸಿ ಮಾತಾಡಿದರು.

ಡಿ. ಮೇಜಿಸ್ಟ್ರೇಟರು ಜವಾಬಿತ್ತ ಮೇಲೆ ಠರಾವನ್ನು ಓಟಿಗೆ ಹಾಕಲಾಗಿ, ಕಾಂಗ್ರೆಸ್ ಮೆಂಬರುಗಳು, ಶ್ರೀ ಯಂ. ಯಂ. ಬೆಳ್ಯಪ್ಪ, ಎನ್. ಸೋಮಣ್ಣ ಮತ್ತು ಚೌಡ್ಲು ಕಾಳಪ್ಪ ಇವರು ಪರವಾಗಿಯೂ ರಾಮಮೂರ್ತಿ ಮತ್ತು ಕೆ. ಮಲ್ಲಪ್ಪನವಲ್ಲದೆ ಉಳಿದವರು ವಿರೋಧವಾಗಿಯೂ ಓಟು ಮಾಡಿದರು. ಠರಾವು ಪಾಸಾಯಿತು.

12. 'ಕೊಡಗಿನಲ್ಲಿ ಭೂಮಿ ಅಡಮಾನ ಬ್ಯಾಂಕನ್ನು ಸ್ಥಾಪಿಸಲು ತಕ್ಕ ಕ್ರಮಗಳನ್ನು ಕೈಕೊಳ್ಳಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸುಮಾಡುತ್ತದೆ.' ಎಂಬ ಗೊತ್ತುವಳಿಯನ್ನು ಶ್ರೀ ಯಂ. ಯಂ. ಬೆಳ್ಯಪ್ಪನವರು ಸೂಚಿಸಿ, ರೈತರ ಅಭಿವೃದ್ಧಿಯಾಗಬೇಕಾದರೆ ಅವರ ಸಾಲದ ಹೊರೆಯು ಕಮ್ಮಿಯಾಗಬೇಕೆಂದೂ, ಆದ್ದರಿಂದ ಭೂಮಿ ಅಡಮಾನ ಬ್ಯಾಂಕನ್ನಾದರೂ ಸ್ಥಾಪಿಸುವದು ಹಿತವೆಂದೂ, ಬೇರೆ ಪ್ರಾಂತಗಳಲ್ಲೆಲ್ಲಾ ಈ ಬ್ಯಾಂಕು ಜಯಪ್ರದವಾಗಿ ಕೆಲಸ ಮಾಡುತ್ತಿದೆಯೆಂದೂ ಹೇಳಿದರು.

ಶ್ರೀ ರಾಮಮೂರ್ತಿಯವರು ಅನುಮೋದಿಸಿದರು.

ಫೈನಾನ್ಸು ಮೆಂಬರು– ಭೂಮಿ ಅಡಮಾನ ಬ್ಯಾಂಕಿನ ವಿಚಾರ ಸರಕಾರವು ಯೋಚನೆ ನಡೆಸಿದೆಯೆಂದೂ, ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ಸರಕಾರಕ್ಕೆ ಅದನ್ನು ಸ್ಥಾಪಿಸಲಸಾಧ್ಯವೆಂದೂ, ಭೂಮಿ ಅಡಮಾನ ಬ್ಯಾಂಕನ್ನು ಸ್ಥಾಪಿಸಲು ಕಮ್ಮಿ ಪಕ್ಷ 2 ಲಕ್ಷ ರೂಪಾಯಿಗಳಾಗಬೇಕೆಂದೂ, ಇದು ಈ ಸಂದರ್ಭದಲ್ಲಿ ದುಃಸಾಧ್ಯವೆಂದೂ, ರೈತರ ಸಾಲ ನಿವಾರಣೆಗಾಗಿ 50,000 ರೂಪಾಯಿಯನ್ನು ಧೀರ್ಘ ಕಂತಿನ ಸಾಲ ಕೊಡುತ್ತಿರುವವೆಂದೂ, ಸೆಂಟ್ರಲ್ ಬ್ಯಾಂಕಿನ ಶರತ್ತುಗಳನ್ನು ಅಲೋಚಿಸಲಾಗುವದೆಂದೂ ಹೇಳಿ ಠರಾವನ್ನು ವಿರೋಧಿಸಿದರು.

ಶ್ರೀ ಕೆ. ಸಿ. ಕರುಂಬಯ್ಯನವರು ಭೂಮಿ ಅಡಮಾನ ಬ್ಯಾಂಕು ಕೊಡಗಿಗೆ ಹಿತಕರವಲ್ಲವೆಂದೂ, ಇದರಿಂದ ಜಮ್ಮ ಮೊದಲಾದ ಇತರ ರಿಯಾಯಿತಿಗಳು ಹಾಳಾಗಬಹುದೆಂದೂ, ಕೊಡಗಿನಂತ ಸಣ್ಣ ದೇಶದಲ್ಲಿ ಈ ಬ್ಯಾಂಕಿಗೆ ತಕ್ಕಷ್ಟು ಕೆಲಸವಿಲ್ಲವೆಂದೂ, ಇವನ್ನು ಸ್ಥಾಪಿಸಿದರೆ ಸೆಂಟ್ರಲ್ ಬ್ಯಾಂಕಿಗೂ ಇದಕ್ಕೂ ತಿಕ್ಕಾಟ ಬರಬಹುದೆಂದೂ, ಇದಕ್ಕಾಗಿ ಸರಕಾರವು ಸೆಂಟ್ರಲ್ ಬ್ಯಾಂಕಿಗೆ ಹಣ ಸಹಾಯ ಮಾಡಿದರೆ ಅವರ ಮೂಲಕವೇ ದೀರ್ಘಕಂತಿನ ಸಾಲ ಕೊಡಬಹುದೆಂದೂ, ಸೊಸೈಟಿಗಳ ಮುಖಾಂತರ ಸಾಲ ಕೊಡುವದರಿಂದ ಜಮ್ಮ ಮೊದಲಾದ ರಿಯಾಯಿತಿಯ ಭೂಮಿಗಳಿಗೆ ಧಕ್ಕೆ ಬಾರದೆಂದೂ, ಆದ್ದರಿಂದ ಠರಾವನ್ನು ವಿರೋಧಿಸುತ್ತೇನೆಂದೂ ಹೇಳಿದರು.

ಶ್ರೀ ಕೆ. ಮಲ್ಲಪ್ಪನವರು, ಭೂಮಿ ಅಡಮಾನ ಬ್ಯಾಂಕು ಪ್ರಜಾ ಜವಾಬ್ದಾರಿಯುಳ್ಳದಲ್ಲವೆಂದೂ, ಸೆಂಟ್ರಲ್ ಬ್ಯಾಂಕಿಗೂ, ಇದಕ್ಕು ಸ್ಪರ್ಧೆ ಬರಲಿಕ್ಕಿಲ್ಲವೆಂದೂ, ಸಾಗು ರೈತರಿಗೆ ಇದರಿಂದ ತುಂಬಾ ಪ್ರಯೋಜನವಿದೆಯೆಂದೂ, ಆದ್ದರಿಂದ ಠರಾವನ್ನು ಸಮರ್ಥಿಸುತ್ತೇನೆಂದೂ ಹೇಳಿದರು.

ಶ್ರೀ ಪಿ. ಐ. ಬೆಳ್ಯಪ್ಪನವರು ಇಡೀ ಕೊಡಗೇ ಭೂಮಿ ಅಡಮಾನ ಬ್ಯಾಂಕಿಗೆ ಸಣ್ಣದಾಗಿರುವಾಗ, ಸಾಗಿನವರಿಗೆ ಮಾತ್ರ ಸ್ಥಾಪಿಸುವದು ಅಸಾಧ್ಯವೆಂದೂ, ಮೆಂಬರುಗಳಿಗೆ ಸಾಲಕೊಟ್ಟು ಅವರ ಭೂಮಿಯನ್ನು ಹಾಳುಮಾಡುವದರಿಂದ ಲಾಭವಿಲ್ಲವೆಂದೂ, ಈ ಬ್ಯಾಂಕನ್ನು ಸ್ಥಾಪಿಸಿದರೆ ಮಿಂಡಿತವಾಗಿಯೂ ಸೆಂಟ್ರಲ್ ಬ್ಯಾಂಕಿನೊಂದಿಗೆ ಸ್ಪರ್ಧೆ ಬಾರದೆಂದೂ, ಆದ್ದರಿಂದ ಠರಾವನ್ನು ವಿರೋಧಿಸುತ್ತೇನೆಂದೂ ಹೇಳಿದರು.

ಶ್ರೀ ಬಿ. ಯಂ. ಕಾರ್ಯಪ್ಪನವರು ಠರಾವನ್ನು ವಿರೋಧಿಸಿ ಮಾತಾಡಿದರು.

ಶ್ರೀ ಎನ್. ಸೋಮಣ್ಣನವರು ಆರ್ಥಿಕ ವಿಚಾರಣಾ ಸಮಿತಿಯ ಕೆಲವು ಷರಹಗಳನ್ನು ಓದಿ ಠರಾವನ್ನು ಪುಷ್ಟೀಕರಿಸಿದರು.

ಶ್ರೀ ಯಂ. ಯಂ. ಬೆಳ್ಯಪ್ಪನವರು ಜವಾಬಿತ್ತರು.

ಫೈನಾನ್ಸು ಮೆಂಬರು ಎಲ್ಲಾ ರೈತರ ಸಾಲಗಳನ್ನು ನಿವಾರಿಸುವದು ಅಸಾಧ್ಯವೆಂದೂ, ಪಂಜಾಬು ಮತ್ತು ಬೊಂಬಾಯಿಯಲ್ಲಿ ಭೂಮಿ ಅಡಮಾನ ಬ್ಯಾಂಕು ಜಯಪ್ರದವಾಗಿಲ್ಲವೆಂದೂ, ಇಲ್ಲಿ ಆರ್ಥಿಕ ತೊಂದರೆಯಿರುವದರಿಂದ ಠರಾವನ್ನು ವಿರೋಧಿಸುತ್ತೇನೆಂದರು.

ಓಟಿಗೆ ಹಾಕಲಾಗಿ ಕಾಂಗ್ರೆಸ್ ಪರ ಮೆಂಬರುಗಳು ಮತ್ತು ಯೂರೋಪಿಯನ್ ಮೆಂಬರುಗಳು ವಿರೋಧವಾಗಿಯೂ, ಬಾಕಿ ಚುನಾಯಿತ ದೇಶೀಯ ಮೆಂಬರುಗಳು ಪರವಾಗಿಯೂ ಓಟು ಮಾಡಿದ್ದರಿಂದ ಠರಾವು ಬಿದ್ದು ಹೋಯಿತು.

13. ಶ್ರೀ ಯಂ. ಯಂ. ಬೆಳ್ಯಪ್ಪನವರು 'ಪ್ರಾಂತೀಕ ಮಾರ್ಕೆಟಿಂಗ್ ಸೊಸೈಟಿಯನ್ನು ಸ್ಥಾಪಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಸಭೆಯ ಮುಂದಿಟ್ಟು, ಕೊಡಗಿನಲ್ಲಿ ಮಾರ್ಕೆಟಿಂಗ್ ಸೊಸೈಟಿ ಇರುವದು ಅತ್ಯಾವಶ್ಯಕವೆಂದೂ, ವೀರಾಜಪೇಟೆಯಲ್ಲಿರುವ ಹೋಲ್‌ಸೇಲ್ ಸೊಸೈಟಿಯು ಜಯಪ್ರದವಲ್ಲವೆಂದೂ, ಆದ್ದರಿಂದ ಒಂದು ಮಾರ್ಕೆಟಿಂಗ್ ಸೊಸೈಟಿ ಮಾಡಿದರೆ ಹಿತವೆಂದೂ, ಸೀನಿಯರ್ ಇನ್ಸ್‌ಪೆಕ್ಟರರ ಕೆಲಸದಿಂದ ಸ್ವೀರುಗಳೇನೂ ಯಶಸ್ವಿಯಾಗಿಲ್ಲವೆಂದೂ ಹೇಳಿದರು.

ಶ್ರೀ ಕೆ. ಮಲ್ಲಪ್ಪನವರು ಟಿಪ್ಪಣಿ ಕೊಟ್ಟರು.

ಫೈನಾನ್ಸು ಮೆಂಬರು, ಮಾರ್ಕೆಟಿಂಗ್ ಸೊಸೈಟಿಯು ಆಗತ್ಯವೆಂದೂ, ಈ ವಿಚಾರ ಯೋಚಿಸಲಾಗುವದೆಂದೂ ಹೇಳಿದರು.

ಓಟಿಗೆ ಹಾಕಲಾಗಿ ಎಲ್ಲಾ ಚುನಾಯಿತ ದೇಶೀಯ ಮೆಂಬರುಗಳು ಪರವಾಗಿ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

14. 'ಎಲಿಮೆಂಟರಿ ಮತ್ತು ಹೈಸ್ಕೂಲುಗಳಿಗೆ ಪಠ್ಯಪುಸ್ತಕಗಳನ್ನು ನಿಶ್ಚೈಸಲು ಒಂದು ಟಿಕ್ಸ್ಟ್ ಬುಕ್ ಕಮಿಟಿಯನ್ನೇರ್ಪಡಿಸಲು ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಕೌನ್ಸಿಲು ಚೀಫ್ ಕಮಿಷನರಿಗೆ ಮನವಿ ಮಾಡುತ್ತದೆ' ಎಂಬ ಠರಾವನ್ನು ಶ್ರೀ ಯಂ. ಯಂ. ಬೆಳ್ಯಪ್ಪನವರು ಸೂಚಿಸಿ, ಕೊಡಗಿನ ಶಾಲೆಯ ಪಾಠ ಪುಸ್ತಕಗಳು ಆಗಾಗ್ಯೆ ಬದಲಾಗುವದರಿಂದ ಪೋಷಕರಿಗೆ ಇದೊಂದು ಹೊರೆಯಾಗಿದೆಯೆಂದೂ, ಮದ್ರಾಸು ಗವರ್ನಮೆಂಟಿನಲ್ಲಿ ಅವರೇ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಲಾಭವನ್ನು ತೆಗೆದುಕೊಳ್ಳುತ್ತಾರೆಂದೂ, ಆದರೆ ಇಲ್ಲಿ ಕೆಲವು ವ್ಯಾಪಾರಸ್ಥರು ಲಾಭ ಹೊಂದುತ್ತಾರೆಂದೂ ಆದ್ದರಿಂದ ಇದಕ್ಕೆ ಒಂದು ಕಮಿಟಿಯನ್ನೇರ್ಪಡಿಸುವದು ಆಗತ್ಯವೆಂದೂ ಹೇಳಿದರು.

ಶ್ರೀ ರಾಮಮೂರ್ತಿಯವರು ಅನುಮೋದಿಸಿದರು.

ವಿದ್ಯಾ ಇಲಾಖಾ ಮೆಂಬರು– ಠರಾವನ್ನು ವಿರೋಧಿಸುವ ಅಪೇಕ್ಷೆ ಇಲ್ಲವೆಂದೂ, ಮದ್ರಾಸಿನ ಟಿಕ್ಸ್ಟ್ ಬುಕ್ ಕಮಿಟಿಯವರು ಮೇಲ್ತರಗತಿಗಳಿಗೆ ಮಾತ್ರ ಪುಸ್ತಕಗಳನ್ನು ಚುನಾಯಿಸುವರೆಂದೂ, ಆದ್ದರಿಂದ ಇಲ್ಲಿಯೂ ಹಾಗೆಯೇ ಮಾಡುವುದು ಸರಿಯೆಂದೂ, ಈ ವಿಚಾರ ಯೋಚನೆ ಮಾಡಲಾಗುವದೆಂದೂ ಭರವಸೆಯಿತ್ತು ಮೇರೆ ಠರಾವನ್ನು ವಾಪಾಸು ತೆಗೆದುಕೊಳ್ಳಲಾಯಿತು.

15. 'ಕೊಡಗಿನ ಹೈಯರ್ ಮತ್ತು ಲೋವರ್ ಎಲಿಮೆಂಟರಿ ಶಾಲೆಗಳಿಗೆ ಪಠ್ಯ ಪುಸ್ತಕಗಳನ್ನು ನಿಶ್ಚೈಸಲು ಒಂದು ಟಿಕ್ಸ್ಟ್ ಬುಕ್ ಕಮಿಟಿಯು ನೇಮಿಸಲ್ಪಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಮನವಿ ಮಾಡುತ್ತದೆ' ಎಂಬ ಠರಾವನ್ನು ಇದೇ ಅರ್ಥದ ಮೇಲ್ಕಂಡ ಠರಾವು ಚರ್ಚೆಯಾದ್ದರಿಂದ ಶ್ರೀ ಎನ್. ಸೋಮಣ್ಣನವರು ವಾಪಾಸು ತೆಗೆದುಕೊಂಡರು.

16. 'ವ್ಯವಸಾಯದ ವಿಚಾರ ಸಲಹೆ ಕೊಡಲು ಮಂಡಲಿಯೊಂದನ್ನು ಸ್ಥಾಪಿಸಲು ತಕ್ಕ ಕ್ರಮವನ್ನು ಕೈಕೊಳ್ಳಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಶ್ರೀ ಮನೆಯಪಂಡ ಬೆಳ್ಯಪ್ಪನವರು ವಾಪಾಸು ತೆಗೆದುಕೊಂಡರು.

17. ಶ್ರೀ ಯಂ. ಯಂ. ಬೆಳ್ಯಪ್ಪನವರು 'ಸಂತೆ ದಿನಗಳಲ್ಲಿ ಸೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ಮುಚ್ಚಲು ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಈ ಕೌನ್ಸಿಲು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಸೂಚಿಸಿ, ಇದು ಮದ್ಯಪಾನ ನಿರೋಧ ಚಳವಳದ ಪ್ರಥಮ ಹೆಜ್ಜೆಯೆಂದೂ, ಸಂತೆ ದಿನಗಳಲ್ಲಿ ಬರೇ ಬಡ ಜನರು ಬಂದು ಸೇಂದಿ, ಸಾರಾಯಿ ಕುಡಿಯುವದಾಗಿದೆಯೆಂದೂ, ಆದ್ದರಿಂದ ಬಡ ಜನರ ಹಿತಕ್ಕಾಗಿ ಇದು ಸಂತೆ ದಿನಗಳಲ್ಲಿ ನಿಲ್ಲಿಸಲ್ಪಡಬೇಕೆಂದೂ, ಹೇಳಿದರು.

ಶ್ರೀ ಐನಂಡ ಕಾರ್ಯಪ್ಪನವರು ಅನುಮೋದಿಸಿದರು.

ಫೈನಾನ್ಸು ಮೆಂಬರು ಠರಾವನ್ನು ವಿರೋಧಿಸುತ್ತಾ ಹೀಗೆ ಮಾಡುವುದರಿಂದ ದೇಶದ ಆರ್ಥಿಕ ಸ್ಥಿತಿಯು ಇನ್ನೂ ಕುಗ್ಗುವದೆಂದೂ, ರೈತರಿಗೆ ಕಂದಾಯದಲ್ಲಿ ಮೊಫಿ ಬಿಟ್ಟದ್ದರ ಜೊತೆಗೆ ಇದು ಸೇರಿದರೆ ಸರ್ಕಾರಕ್ಕೆ ತುಂಬಾ ಧಕ್ಕೆ ತಗಲುವದೆಂದೂ ಹೇಳಿದರು.

ಕರ್ನಲ್ ಮೂರ್ಲೆಂಡರು ತೋಟದ ಕೂಲಿಗಳ ಹಿತ ದೃಷ್ಟಿಯಿಂದ ಸಂತೆ ದಿನಗಳಲ್ಲಿ ಸೇಂದಿ, ಸಾರಾಯಿ ಅಂಗಡಿಗಳನ್ನು ಮುಚ್ಚಬಾರದೆಂದು ಹೇಳಿ ಠರಾವನ್ನು ವಿರೋಧಿಸಿದರು.

ಶ್ರೀ ಅಬ್ದುಲ್ ರಹಮಾನ್ ಖಾನರು ತಾನು ಮುಸಲ್ಮಾನನಾಗಿ ಈ ಠರಾವಿಗೆ ಒತ್ತಾಸೆ ಮಾಡುವುದು ಅಗತ್ಯವಿದ್ದರೂ ಹಿಂದುಳಿದ ಪಂಗಡದವರ ಪರ ನೇಪುಕವಾದವನಾದ್ದರಿಂದ ಅವರ ಹಿತ ದೃಷ್ಟಿಯಿಂದ ಠರಾವನ್ನು ವಿರೋಧಿಸುತ್ತೇನೆಂದರು.

ಶ್ರೀ ಕೆ. ಮಲ್ಲಪ್ಪನವರು ಠರಾವನ್ನು ಸಮರ್ಥಿಸಿ ಈ ಸಲಹೆಯು ಲಜ್ಜಾಸ್ಪದವಾದದ್ದಾಗಿದೆಯೆಂದೂ, ಸೇಂದಿ ಸಾರಾಯಿ ಅಂಗಡಿಗಳನ್ನು ತೆಪೆದಿಡುವದು ಕೂಲಿಗಾರರಿಗೆ ಹಿತಕರವಲ್ಲವೆಂದೂ ಹೇಳಿದರು.

ಶ್ರೀ ಪಿ. ಐ. ಬೆಳ್ಯಪ್ಪನವರು– ಭಾರತದ ಎಲ್ಲಾ ಭಾಗಗಳಲ್ಲೂ ಮಾದನಿರೋಧ ಕಾರ್ಯಕ್ರಮಗಳ ಪ್ರಯತ್ನವು ನಡೆಯುತ್ತಿವೆಯೆಂದೂ, ನಾವೂ ಅವನ್ನು ಅನುಸರಿಸುವುದು ಯೋಗ್ಯವೆಂದೂ, ಬೇರೆ ಪ್ರಾಂತದಲ್ಲಿ ಈ ಕಾರ್ಯಕ್ರಮದಿಂದ ನಷ್ಟವಾಗುವ ಹಣವನ್ನು ಯಾವ ಯೋಜನೆಯಿಂದ ಸರಿಪಡಿಸುವರೋ ಅದೇ ಯೋಜನೆಯನ್ನು ಇಲ್ಲಿಯೂ ತರಬಹುದೆಂದೂ, ಬರೇ ಸಂತೆ ಸ್ಥಳಗಳಲ್ಲಿ ಇವನ್ನು ಮುಚ್ಚುತಕ್ಕದ್ದು ಮಾತ್ರವಲ್ಲ ಇತರ ಜನರು ಕೂಡುವಲ್ಲಿ ಸಹ ಇದು ನಿಲ್ಲಿಸಲ್ಪಡಬೇಕೆಂದೂ ಹೇಳಿ ಠರಾವಿಗೆ ಒತ್ತಾಸೆಯಿತ್ತರು.

ಫೈನಾನ್ಸು ಮೆಂಬರರು ಜವಾಬಿತ್ತ ಮೇಲೆ ಓಟಿಗೆ ಹಾಕಲಾಗಿ ಚೌಡ್ಲು ಕಾಳಪ್ಪನವರಲ್ಲದೆ ಎಲ್ಲ ಚುನಾಯಿತ ದೇಶೀಯ ಸದಸ್ಯರು ಪರವಾಗಿ ಓಟು ಮಾಡಿದ್ದರಿಂದ ಠರಾವು ಮಂಜೂರಾಯಿತು.

18. 'ಹೊಸ ದುರ್ಗದೊಂದಿಗೆ ಭಾಗಮಂಡ್ಲವನ್ನು ಸಂಯೋಜಿಸುವಂತೆ ಒಂದು ರಸ್ತೆಯನ್ನು ಮಾಡಿಸಲು ತಕ್ಕ ಕ್ರಮಗಳನ್ನು ಕೈಕೊಳ್ಳಲು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸು ಮಾಡುತ್ತದೆ' ಎಂಬ ಠರಾವನ್ನು ಶ್ರೀ ಯಂ. ಯಂ. ಬೆಳ್ಯಪ್ಪನವರು ಸಭೆಯ ಮುಂದಿಟ್ಟು ಹೊಸ ದುರ್ಗದಿಂದ ಭಾಗಮಂಡ್ಲಕ್ಕೆ 40 ಮೈಲುಗಳ ಅಂತರವಿದೆಯೆಂದೂ, ದಕ್ಷಿಣ ಕನ್ನಡದ ರೋಡಿಗೆ ಬರೇ 16 ಮೈಲು ದೂರವಿದೆಯೆಂದೂ, ಇದಕ್ಕೆ ಫಾರೆಸ್ಟು ಇಲಾಖೆಯವರ ಸಹಾಯ ಅತ್ಯಗತ್ಯವೆಂದೂ ಹೇಳಿದರು.

ಶ್ರೀ ಕೋರನ ದೇವಯ್ಯನವರು ಅನುಮೋದಿಸಿದರು.

(9 ನೇ ಪುಟ ನೋಡಿ).

ಕೊಡಗು

ನವಂಬರ್ ತಾರೀಕು ೪ನೇ ಶುಕ್ರವಾರ ೧೯೩೮.

ಡಿಸ್ಟ್ರಿಕ್ಟ್ ಬೋರ್ಡಿನ ಬಡ್ಜೆಟ್.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ 1938–39 ನೇ ವರ್ಷದ ಬಡ್ಜೆಟ್ಟನ್ನು ಸರಿಪಡಿಸಲು ಕಳೆದ ತಾ. 31 ರಲ್ಲಿ ಬೋರ್ಡಿನ ಮೀಟಿಂಗೊಂದು ನಡೆಯಿತು. ಬೋರ್ಡಿನ ಈ ವರ್ಷದ ಆದಾಯ ವೆಚ್ಚವನ್ನು ಚರ್ಚಿಸಲು ಮಾಡಿದ ಮೀಟಿಂಗುಗಳಲ್ಲಿ ಇದು ನಾಲ್ಕನೇಯದ್ದಾಗಿದೆ. ನಿಬಂಧನೆ ಪ್ರಕಾರ ಫೆಬ್ರವರಿ ತಿಂಗಳಲ್ಲಿ ಪ್ರಥಮ ಬಡ್ಜೆಟ್ ಮೀಟಿಂಗು ನಡೆಸಲ್ಪಟ್ಟಿತು. ಆಪರೇಟಿಂಗ್ ಅಧ್ಯಕ್ಷರ ಮೇಲೆ ಚುನಾಯಿತ ಮೆಂಬರುಗಳಿಗೆ ವಿಶ್ವಾಸವಿಲ್ಲದ ಕಾರಣ ಬಡ್ಜೆಟ್ಟನ್ನು ಮಂಜೂರು ಮಾಡಲಿಲ್ಲ. ಮಾರ್ಚಿ ತಿಂಗಳಲ್ಲಿ ಕಮಿಷನರವರ ಪತ್ರದ ಮೇರೆ ಪುನಃ ಬೋರ್ಡಿನ ಮೀಟಿಂಗು ನಡೆಸಲಾಯಿತು. ಆದರಲ್ಲೂ ಚುನಾಯಿತ ಮೆಂಬರುಗಳು ಬಡ್ಜೆಟ್ಟನ್ನು ಮಂಜೂರು ಮಾಡಲು ತಿರಸ್ಕರಿಸಿದರು. ನಂತರ ಬೋರ್ಡು ಬರಕಾಸ್ತು ಮಾಡಲ್ಪಟ್ಟು, ಮೇ ತಿಂಗಳಲ್ಲಿ ಹೊಸ ಚುನಾವಣೆ ನಡೆಯಿತು. ಜೂನ್ ತಿಂಗಳಲ್ಲಿ ಹೊಸ ಅಧ್ಯಕ್ಷರ ಚುನಾವಣೆ ಆಯಿತು. ಜುಲೈ ತಿಂಗಳಲ್ಲಿ ಬಡ್ಜೆಟ್ಟನ್ನು ಚರ್ಚಿಸಲು ಹೊಸ ಬೋರ್ಡಿನ ಸಭೆ ಸೇರಿತು. ಆಗ್ಯೆ ಪಾಸು ಮಾಡಿದ ಬಡ್ಜೆಟಿನಲ್ಲಿ ಆದಾಯಕ್ಕೆಂತ ವೆಚ್ಚ ಹೆಚ್ಚಾಯಿತೆಂದೂ, ಅದನ್ನು ಸರಿಪಡಿಸಬೇಕೆಂದೂ ಚೀಫ್ ಕಮಿಷನರು ಕೇಳಿಕೊಂಡ ಮೇರೆ ಈ ಮೀಟಿಂಗು ಸೇರಿದ್ದಾಗಿದೆ.

ಜುಲೈಯಲ್ಲಿ ನಡೆದ ಹೊಸ ಬೋರ್ಡಿನ ಪ್ರಥಮ ಬಡ್ಜೆಟ್ ಮೀಟಿಂಗಿನಲ್ಲಿ, ಕಳೆದ ಫೆಬ್ರವರಿ ತಿಂಗಳಲ್ಲಿ ಹಳೇ ಬೋರ್ಡಿನ ಮುಂದಿಡಲ್ಪಟ್ಟಿದ್ದ ಆಡಿಕೆಯ ಕೆಲಸಗಳ ಅಂದಾಜು ಬಡ್ಜೆಟ್ಟನ್ನು ಪಾಸು ಮಾಡಿದ್ದಲ್ಲದೆ ಉಳುವರಿ ಇದ್ದ ಸುಮಾರು 28,000 ರೂ. ಪೈಕಿ ಸುಮಾರು 9,000 ರೂಪಾಯಿಯನ್ನು ಹೊಸ ಕೆಲಸಗಳಿಗೆ ಮಂಜೂರು ಮಾಡಿದರು. ಈ ಬಡ್ಜೆಟು ಚೀಫ್ ಕಮಿಷನರವರಿಗೆ ತಲಪಿದ ಮೇಲೆ ಸರ್ಕಾರದವರು ಬೋರ್ಡಿಗೆ ಕೊಡುತ್ತಿರುವ ವಾರ್ಷಿಕ ವಂತಿಗೆ ಸುಮಾರು ರೂ. 49,000 ದಲ್ಲಿ ರೂ. 7,000 ಕಡಿಮೆ ಮಾಡಲ್ಪಡುವ ಸಂಭವವಿರುವುದರಿಂದ, ಆ ಷ್ಟರ ಮಟ್ಟಿಗೆ ಬೋರ್ಡಿನ ಖರ್ಚನ್ನು ಖೋತೆ ಮಾಡಲು ಒಂದು ಕಮಿಟಿಯನ್ನು ನೇಮಿಸಬೇಕೆಂದು ಚೀಫ್ ಕಮಿಷನರು ಬೋರ್ಡಿಗೆ ಬರೆದು ತಿಳಿಸಿದರು. ಕೂಡಲೆ ಬೋರ್ಡಿನ ಒಂದು ಡೆಪ್ಯುಟೇಶನಿನವರು ಚೀಫ್ ಕಮಿಷನರವರನ್ನು ಭೇಟಿ ಮಾಡಿ, ಬೋರ್ಡಿನ ಆರ್ಥಿಕ ಸ್ಥಿತಿಯು ಬಹಳ ಹೀನಾವಸ್ಥೆಯಲ್ಲಿರುವದರಿಂದ ಸರ್ಕಾರದವರು ಕೊಡುವ ವಂತಿಗೆಯನ್ನು ಕಡಿಮೆ ಮಾಡಬಾರದೆಂದೂ, ಹಾಗೆ ಮಾಡಿದ್ದೇ ಆದರೆ ಜನರಿಗೆ ಬಹು ಉಪಯುಕ್ತವಾಗಿರುವ ಗ್ರಾಮಾಂತರ ರಸ್ತೆ, ಆಸ್ಪತ್ರೆ, ಶಾಲೆ ಮೊದಲಾದವುಗಳನ್ನು ಮುಚ್ಚಬೇಕಾಗುವುದೆಂದೂ, ಗ್ರಾಮಾಂತರ ಜನಗಳ ಕೋರಿಕೆಗಳು ಎಷ್ಟೋ ಇದ್ದರೂ ಕೂಡ ಅವುಗಳಲ್ಲಿ ಬಹು ಸ್ವಲ್ಪವುಗಳಿಗೆ ಮಾತ್ರ ಈ ಸಾರಿ ಹಣ ಮಂಜೂರು ಮಾಡಿರುವುದರಿಂದ ಅವುಗಳನ್ನು ವಜಾ ಮಾಡುವುದು ನ್ಯಾಯವಲ್ಲವೆಂದೂ ಮುಂತಾಗಿ ಅವರಿಗೆ ಹೇಳಿದರು. ಹಣದ ಅಭಾವದಿಂದ ಸರ್ಕಾರದವರೇ ಸಿಬ್ಬಂದಿ ಖೋತೆ ಮಾಡುತ್ತಿರುವದರಿಂದ ಬೋರ್ಡಿಗೆ ಕೊಡುವ ಗ್ರಾಂಟನ್ನು ಕಡಿಮೆಮಾಡಬೇಕಾಗುವದೆಂದೂ, ಬೋರ್ಡಿನವರೂ ತಮ್ಮ ಖರ್ಚನ್ನು ಖೋತೆ ಮಾಡುವ ಪ್ರಯತ್ನ ಮಾಡತಕ್ಕದ್ದೆಂತಲೂ ಚೀಫ್ ಕಮಿಷನರು ಜವಾಬನ್ನಿತ್ತರು. ಅನಂತರ ಚೀಫ್ ಕಮಿಷನರವರು—ಸರ್ಕಾರದವರು ಬೋರ್ಡಿಗೆ ಕೊಡುವ ವಾರ್ಷಿಕ ಗ್ರಾಂಟಿನಲ್ಲಿ ಏಳು ಸಾವಿರ ರೂ. ಕಡಿಮೆ ಮಾಡುವ ಸಂಭವವಿರುವುದರಿಂದ ಬಡ್ಜೆಟ್ಟಿನಲ್ಲಿ ತೋರಿಸಿರುವ 9,000 ರೂಪಾಯಿಯ ಹೊಸ ಕೆಲಸಗಳನ್ನೆಲ್ಲಾ ವಜಾಮಾಡತಕ್ಕದ್ದಲ್ಲದೆ, ಬೋರ್ಡಿನ ಈ ವರ್ಷದ (ಹೊಸ ಕೆಲಸಗಳು ಸೇರಿ) ಖರ್ಚು ಆದಾಯವನ್ನು ಸುಮಾರು 18,000 ದಷ್ಟು ವಿರುವುದರಿಂದ ವಾಡಿಕೆಯ ವೆಚ್ಚದಲ್ಲಿಯೂ ಸಾಧ್ಯವಾದಷ್ಟು ಖೋತೆ ಮಾಡಬೇಕೆಂದು ಬೋರ್ಡಿಗೆ ಪುನಹ ಪತ್ರ ಬರೆದರು.

ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಖಾನೂನಿನ ಮೇರೆ ಖಡ್ಡಾಯವಾಗಿ ಇಡಬೇಕಾದ ಉಳುವರಿ ಹತ್ತು ಸಾವಿರ ರೂಪಾಯಿ. ಇದಲ್ಲದೆ 1927–28 ರಲ್ಲಿ ಬೋರ್ಡಿನಲ್ಲಿ ಸುಮಾರು ಆರವತ್ತು ಸಾವಿರ ರೂಪಾಯಿ ಉಳುವರಿ ಇತ್ತು. ಇದೆನ್ನು ಬೋರ್ಡಿನವರು ಹೊಸ ಶಾಲೆ, ಆಸ್ಪತ್ರೆ, ಗ್ರಾಮಾಂತರ ರಸ್ತೆ ಮೊದಲಾದವುಗಳನ್ನು ತೆರೆಯಲು ಉಪಯೋಗಿಸಿ, ಅವುಗಳ ವರ್ಷಂಪ್ರತಿ ಖರ್ಚನ್ನೂ ಅವರಿಂದಲೇ ನಡೆಸುತ್ತಾ ಬಂದರು. ಈಗ ಆ ಉಳುವರಿಯು ತೀರುತ್ತಾ ಬಂದು ಈ ವರ್ಷದ ಅಂತ್ಯದಲ್ಲಿ ಆರು ಸಾವಿರವೇ ನಿಲ್ಲುವುದು. ಜುಲೈ ತಿಂಗಳ ಮೀಟಿಂಗಿನಲ್ಲಿ ಪಾಸು ಮಾಡಿದ ಬಡ್ಜೆಟ್ಟಿನ ಮೇಲೆ ಬೋರ್ಡಿನ ಈ ವರ್ಷದ ಉತ್ಪತ್ತಿ ರೂ. 1,62,000: ಖರ್ಚು ರೂ. 1,80,000; ಅಂದರೆ ವೆಚ್ಚವು ಆದಾಯಕ್ಕಿಂತ 18,000 ಹೆಚ್ಚು. ಇದರಲ್ಲಿ ಹೊಸ ಕೆಲಸಗಳಿಗಾಗಿ ಇಡಲ್ಪಟ್ಟ ರೂ. 9,000 ವಜಾ ಮಾಡಿದರೂ ಕೂಡ ವಾಡಿಕೆಯ ಕೆಲಸಗಳ ವೆಚ್ಚವು ಉತ್ಪತ್ತಿಯನ್ನು ರೂ. 9,000 ದಷ್ಟು ವಿರುತ್ತದೆ. ಈ ರೀತಿ ಬೋರ್ಡಿನ ಕೆಲಸಗಳನ್ನು ಬರುವ ವರ್ಷದಿಂದ ನಡೆಸಲು ಸಾಧ್ಯವಾಗುವುದೇ ಇಲ್ಲ. ಇದರೊಂದಿಗೆ ಸರ್ಕಾರದವರು ಕೊಡುವ ಗ್ರಾಂಟಿನಲ್ಲಿ ರೂ. 7,000 ಕಡಿಮೆ ಮಾಡಿ ಬಿಟ್ಟರೆ ವಾಡಿಕೆಯ ಖರ್ಚು ಆದಾಯವನ್ನು ರೂ. 16,000 ದಷ್ಟು ವಿರುವುದು. ಇದನ್ನು ಸರಿಪಡಿಸುವ ಬಗೆ ಹೇಗೆ? ಇದೀಗ ಬೋರ್ಡಿನ ಮುಂದೆ ನಿಂತಿರುವ ಕಠಿಣ ಸಮಸ್ಯೆಯಾಗಿದೆ.

ಮೊತ್ತವಾಗಿ ನಿಂತಿರುವ ಉಳುವರಿಯನ್ನು ಕಟ್ಟಡ ಕಟ್ಟಿಸುವುದು, ಬಾವಿ–ಕೆರೆ ತೋಡಿಸುವುದು, ಸೇತುವೆ–ಕಟ್ಟಿ ಕಟ್ಟಿಸುವುದು ಮೊದಲಾದ ಒಮ್ಮೆ ಮಾತ್ರ ಖರ್ಚು ತಗಲುವಂಥ ಕೆಲಸಗಳಿಗೆ ಉಪಯೋಗಿಸಬೇಕಲ್ಲದೆ ವರ್ಷಂಪ್ರತಿ ಖರ್ಚು ತಗಲುವ ಶಾಲೆ, ಆಸ್ಪತ್ರೆ, ರಸ್ತೆ ಮೊದಲಾದವುಗಳನ್ನು ತೆರೆಯಲು ವಿನಿಯೋಗಿಸುವುದು ಬಡ್ಜೆಟ್ಟಿನ ಸರಿಯಾದ ತತ್ವವಲ್ಲ. ವರ್ಷಂಪ್ರತಿ ಖರ್ಚು ತಗಲುವ ಕೆಲಸಗಳಿಗೆ ವರ್ಷಂಪ್ರತಿ ಬರುವ ಉತ್ಪತ್ತಿ ಇರಬೇಕು. ಇಲ್ಲವಾದರೆ, ಮೊತ್ತವಾದ ಉಳುವರಿಯು ಮುಗಿದು ಹೋದ ಮೇಲೆ ಆ ಕೆಲಸಗಳನ್ನು ಮುಂದುವರಿಸಲು ಸಾಧ್ಯವಾಗುವುದಿಲ್ಲ. ಈ ತತ್ವವನ್ನು ಅರಿತುಕೊಳ್ಳದೆಯೋ ಅಥವಾ ಅರಿತ್ತಿದ್ದರೂ ಮುಂದೆ ಬರುವ ಬೋರ್ಡಿನವರು ಹೇಗಾದರೂ ಮಾಡಿಕೊಳ್ಳಲಿ ಎಂಬ ಬೇಜವಾಬ್ದಾರಿಯ ಭಾವನೆಯಿಂದಲೋ, ಹಿಂದಿನ ಬೋರ್ಡಿನವರು ಹೀಗೆ ಮಾಡಿದ್ದು ವ್ಯಸನಕರ. ಬೋರ್ಡಿನವರು ಹೀಗೆ ಮಾಡಿದರೂ, ಅದನ್ನು ಚೀಫ್ ಕಮಿಷನರು ಹೇಗೆ ಅಂಗೀಕರಿಸಿದರೋ ತಿಳಿಯದು. ಆಯಾಯ ವರ್ಷದ ವೆಚ್ಚವು ಆದಾಯವನ್ನು ಮೀರಕೂಡದೆಂದು ಈಗ ಹೇಳುವಂಥ ಸರ್ಕಾರದವರು ಈ ಮೊದಲು ಯಾಕೆ ಹೇಳಲಿಲ್ಲ? 1927–28 ರಿಂದಲೇ ಬೋರ್ಡಿನವರು ಈ ತತ್ವವನ್ನನುಸರಿಸಿ ನಡೆಯುವಂತೆ ಸರ್ಕಾರದವರು ಮಾಡಿದ್ದರೆ ಈಗ ಇಂಥಾ ಬಿಕ್ಕಟ್ಟಿನ ಪರಿಸ್ಥಿತಿಗೆ ಬರುತಿತ್ತಿಲ್ಲ. ಈ ಮೊದಲಿನ ಬೋರ್ಡಿನವರೂ—ಹಾಗೂ ಸರ್ಕಾರದವರೂ ಮಾಡಿದ ತಪ್ಪಿಗಾಗಿ ಈಗಿನ ಬೋರ್ಡಿನವರು ಪ್ರಾಯಶ್ಚಿತ್ತ ಮಾಡಬೇಕಾಗಿ ಬಂದಿದೆ.

ಅಂಥಾ ಪ್ರಾಯಶ್ಚಿತ್ತವಾದರೂ ಏನು? ಬಡ್ಜೆಟ್ಟನ್ನು ಸರಿಗಟ್ಟಬೇಕಾದರೆ, ಈ ಮೊದಲು ಉಳಿವರಿಯ ಮೊಬಲಗಿನಿಂದ ನಡಿಸುತ್ತಾ ಬಂದ ಆಸ್ಪತ್ರೆ, ಶಾಲೆ, ರಸ್ತೆ ಮೊದಲಾದವುಗಳನ್ನು ಮುಚ್ಚಬೇಕಾಗುವುದು. ಇಲ್ಲವೆ, ಜನರ ಮೇಲೆ ಹೊಸ ತೆರಿಗೆಯನ್ನು ಹಾಕಬೇಕಾಗುವುದು; ಅಥವಾ ಬಡ ಉಪಾಧ್ಯಾಯರುಗಳ ಮತ್ತು ಇತರ ಉದ್ಯೋಗಸ್ಥರ ಸಂಬಳ ಕಡಿಮೆ ಮಾಡಬೇಕಾಗುವುದು. ಇವುಗಳಲ್ಲಿ ಯಾವುದನ್ನು ಮಾಡಿದರೂ ಈಗ ಬೋರ್ಡಿನಲ್ಲಿ ಬಹುಮತದಲ್ಲಿರುವ ಕಾಂಗ್ರೆಸು ಪಕ್ಷದವರ ಮೇಲೆ ಆರೋಪಣೆಗಳ ಸುರಿಮಳೆಯಾಗದಿರದು. ಆದರೆ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಪಕ್ಷದವರು ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಎದೆಗುಂದದೆ ಮುಂದುವರಿಯಬೇಕಾದದ್ದು ಅವರ ಕರ್ತವ್ಯ. ದೇಶದ ಹಿತದ ದೃಷ್ಟಿಯಿಂದ ಚೆನ್ನಾಗಿ ಆಲೋಚಿಸಿ ಯಾವದು ಉತ್ತಮವಾಗಿ ತೋರುತ್ತೋ, ಅದನ್ನು ನಡಿಸಲು ಹಿಂಜರಿಯಬಾರದು.

ಮೊನ್ನೆ ನಡೆದ ಮೀಟಿಂಗಿನಲ್ಲಿ ಆಯಾಯ ಇಲಾಖೆಗಳ ಮೇಲಧಿಕಾರಿಗಳ ಸಹಕಾರದಿಂದ, ಕಾರ್ಯಸಾಧಕತ್ವಕ್ಕೂ, ಜನರ ಕೋರಿಕೆಗೂ ಕುಂದಕ ಉಂಟಾಗದಂತೆ ವಾಡಿಕೆಯ ಖರ್ಚಿನಲ್ಲಿ ವಿದ್ಯಾ ಇಲಾಖೆಯಲ್ಲಿ ರೂ. 2,800, ಪಿ. ಡಬ್ಲ್ಯು. ಇಲಾಖೆಯಲ್ಲಿ ರೂ. 1,500, ಮತ್ತು ವೈದ್ಯ ಇಲಾಖೆಯಲ್ಲಿ ರೂ. 1000 ಖೋತೆ ಮಾಡುವಂತೆಯೂ, ಹೊಸ ಕೆಲಸಗಳಲ್ಲಿ ಅತಿ ಮುಖ್ಯವಾದವುಗಳನ್ನು ಮಾತ್ರ ಈ ವರ್ಷ ನಡಿಸಿ, ಉಳಿದವುಗಳನ್ನು ಬರುವ ವರ್ಷಕ್ಕೆ ಇಡುವಂತೆಯೂ ನಿಶ್ಚೈಸಿ ಸುಮಾರು ರೂ. 11,000 ಖರ್ಚು ಕಡಿಮೆ ಮಾಡುವಂತೆ ತೀರ್ಮಾನಿಸಿರುವರು. ಇಷ್ಟು ಮಾಡಿದರೂ ಕೂಡ ಈ ವರ್ಷ ವೆಚ್ಚವು ಆದಾಯವನ್ನು ರೂ. 7,000 ದಷ್ಟು ವಿರುವುದು. ಆದುದರಿಂದ ಬರುವ ವರ್ಷದ ಬಡ್ಜೆಟ್ಟನ್ನು ಸರಿಗಟ್ಟಲು ಮಾತ್ರವಲ್ಲ; ಜನರ ಕೋರಿಕೆಗಳ ಪ್ರಕಾರ ದೇಶಕ್ಕೆ ಉಪಯುಕ್ತವಾದ ಹೊಸ ಕೆಲಸಗಳನ್ನು ನಡಿಸಲು ಬೇಕಾದ ಉತ್ಪತಿಯ ದಾರಿಯನ್ನು ಕಂಡು ಹಿಡಿಯಲಿಕ್ಕಾಗಿಯೂ, ಖರ್ಚನ್ನು ಖೋತೆ ಮಾಡುವ ವಿಧಾನವನ್ನು ಸೂಚಿಸಲಿಕ್ಕಾಗಿಯೂ ಬೋರ್ಡಿನವರ ಒಂದು ಕಮಿಟಿಯು ನೇಮಿಸಲ್ಪಟ್ಟದ್ದು ಯುಕ್ತವಾಗಿದೆ.

ಬೋರ್ಡಿಗೆ ಕೊಡುತ್ತಿರುವ ವಾರ್ಷಿಕ ವಂತಿಗೆಯನ್ನು ಕಡಿಮೆ ಮಾಡಬಾರದೆಂದು ಸರ್ಕಾರವನ್ನು ಕೇಳಿಕೊಳ್ಳುವಶರಾವೊಂದು ಮಂಜೂರಾಯಿತು. ಬೋರ್ಡಿನ ಇಂಥಾ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸರ್ಕಾರದವರು ಗ್ರಾಂಟನ್ನು ಕಡಿಮೆ ಮಾಡುವುದರಲ್ಲಿ ಅರ್ಥವಿಲ್ಲ. ಬೋರ್ಡನ್ನು ಇಂಥಾ ಬಿಕ್ಕಟ್ಟಿನ ಸ್ಥಿತಿಗೆ ಇಳಿಸಲು ಮೇಲೆ ಹೇಳಿದಂತೆ ಸರ್ಕಾರದವರೂ ಜವಾಬ್ದಾರರಾಗಿರುವರು. ಅಲ್ಲದೆ ಬೇರೆ ಪ್ರಾಂತ್ಯಗಳ ಜಿಲ್ಲಾ ಬೋರ್ಡುಗಳ ಖರ್ಚುಗಳಲ್ಲಿ ಅರ್ಧಕ್ಕರ್ಧ ಸರ್ಕಾರದವರು ವಂತಿಗೆ ರೂಪವಲ್ಲಿ ಕೊಡುತ್ತಿರುವರು. ಆದರೆ ಇಲ್ಲಿ ಮೂರರಲ್ಲಿ ಒಂದು ಭಾಗವಷ್ಟೂ ಕೂಡ ಕೊಡುತ್ತಿಲ್ಲ. ಇತರ ಪ್ರಾಂತ್ಯಗಳಲ್ಲಿ ಮೋಟಾರು ವಾಹನಗಳ ತೆರಿಗೆಯಿಂದ ಸುಮಾರು ಅರ್ಧವಷ್ಟು ಜಿಲ್ಲಾ ಬೋರ್ಡಿಗೆ ವಂತಿಗೆ ಕೊಡುತ್ತಿರುವರು. ಇಲ್ಲಿ ನಾಲ್ಕರಲ್ಲಿ ಒಂದಂಶದಷ್ಟೂ ಕೊಡುತ್ತಿಲ್ಲ. ಆವಕಾರಣ ಸರ್ಕಾರದವರು ಇಲ್ಲಿಯ ಜಿಲ್ಲಾ ಬೋರ್ಡಿಗೆ ಕೊಡುತ್ತಿರುವ ವಾರ್ಷಿಕ ವಂತಿಗೆಯನ್ನು ಹೆಚ್ಚಿಸಬೇಕಾದದ್ದು ಅವರ ಧರ್ಮವಾಗಿದೆ. ಆದಕ ಬದಲು ಆರೋಗ್ಯ ಇಲಾಖೆಯ ಖರ್ಚಿಗಾಗಿ ಬೋರ್ಡಿನಿಂದ ರೂ. 5,000 ವಂತಿಗೆ ತೆಗೆದು ಕೊಳ್ಳುತ್ತಿರುವುದೂ, (ಹೀಗೆ ಬೇರೆ ಎಲ್ಲಿಯೂ ನಡೆಯುತ್ತಿಲ್ಲ), ಬೋರ್ಡಿಗೆ ಇಷ್ಟರ ವರೆಗೆ ಕೊಡುತ್ತಿರುವ ವಂತಿಗೆಯನ್ನು ಕಡಿಮೆ ಮಾಡುವ ಆಲೋಚನೆಯಲ್ಲಿರುವುದೂ ಎಂದೂ ನ್ಯಾಯವಲ್ಲ. ಇವೆರಡು ವಿಚಾರಗಳಲ್ಲಿ ಸರ್ಕಾರದವರು ಚೆನ್ನಾಗಿ ಆಲೋಚಿಸಿ, ನ್ಯಾಯವಾದ ತೀರ್ಮಾನಕ್ಕೆ ಬಂದು ಇಲ್ಲಿಯ ಜಿಲ್ಲಾ ಬೋರ್ಡಿಗೆ ತಕ್ಕ ಸಹಾಯವನ್ನು ಮಾಡುವರಾಗಿ ನಂಬುತ್ತೇವೆ.

ವರ್ತಮಾನ ಸಂಗ್ರಹ.

ಒಳದೇಶ.

ಚೀಫ್ ಕಮಿಷನರರು ಈ ತಾ. 2 ರಲ್ಲು ಬೆಂಗಳೂರಿಗೆ ವಾಪಸು ಹೋದರೆಂ ತು ತಿಳಿಯುತ್ತೇವೆ.

ಈ ವಾರ ಕೆಲವು ದಿನ ಆಕಾಶದಲ್ಲಿ ತೋಡ ಕನಿಮುಕೊಂಡಿದ್ದು, ದೇಶದ ಕೆಲ ವು ಭಾಗಗಳಿಗೆ ಮಳೆ ಬಿದ್ದಿದೆಯೆಂದು ತಿಳಿ ಯಬರುತ್ತದೆ.

ತಾರೀಕು 15—10—1938ರಲ್ಲಿ ಶೂಲಗಿತ್ತಿ ತರಬೇತು ಕ್ಲಾಸಿಗೆ ನಡೆದ ಚು ತಾವಣೆಯಲ್ಲಿ ವಿಸೆಸ್ ಮೂಳೇಟಿರ ಅಚ್ಚ ನ್ಮ, ಶ್ರೀಮತಿಯರಾದ ಮೂಕಚಂಡ ಪೋಮವ್ವ, ಕೇಚಮೂಡ ಅಕ್ಕಮ್ಮ ಮತ್ತು ಯುಂ. ಸೀತಾ—ಇವರುಗಳು ಆರಿಸಲ್ಪಟ್ಟ ರುವರೆಂದು ತಿಳಿಯುತ್ತೇವೆ.

ಕಳೆದ ಬಿ. ಎ. ಪರೀಕ್ಷೆಯಲ್ಲಿ ಶ್ರೀ ಯುತರುಗಳಾದ ಯಂ. ಯಸ್. ವೆಂಕಟ ಶುಬ್ಬರಾವ್, ಬೊಳ್ಳೆರ ಸಿ ಮುಂಣ್ಣ ಮತ್ತು ಬೊಳ್ಳೆರ ಸಿ. ಅಪ್ಪಯ್ಯನವರು ಪೂರ್ತಿ ಯಾಗಿಯೂ, ಶ್ರೀ ಪಾಂಡಂಡ ಟಿ. ಅಪ್ಪಾಜಿ ಯವರು ಒಂದನೇ ಮತ್ತು ಎರಡನೇ ಭಾಗ ಗಳಲ್ಲಿಯೂ ತೇರ್ಗಡೆಯಾಗಿರುವರೆಂದು ತಿ ಳಿಯಬರುತ್ತದೆ. ಇವರಿಗೆ ನಮ್ಮ ಅಭಿ ನಂದನೆಗಳು.

ಮಡಿಕೇರಿ.

ಅಬ್ಕಾರಿ ಎಡ್ವೈಸರಿ ಬೋರ್ಡಿನ ಮೀಟಿಂಗು ಈ ತಾ. 1 ರಲ್ಲಿ ಇಲ್ಲಿ ಅಸಿ ಸ್ಟೆಂಟ್ ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಳೆದ ತಾ. 26 ರಲ್ಲಿ ಪ್ರಾರಂಭವಾ ದ ಕೊಡಗು ನ್ಯಾಯವಿಧಾಯಕ ಸಭೆಯ ಮೀಟಿಂಗು ಆದೇ ತಾ. 29ರ ಮಧ್ಯಾಹ್ನದ ವರೆಗೆ ನಡೆಯಿತು.

ಈ ವಾರ ಇಲ್ಲಿ ಯೂಲಕ್ಕಿ ಪುಣಕ್ಕೆ 23 ರೂಪಾಯಿಯೂ, ಕಾಫಿ ಖಂಡಿಗೆ 114 ರೂಪಾಯಿಯೂ ಮತ್ತು ಪಾರ್ಚ್ಮೆಂಟ್ ಕಾಫಿ ಹೆಂಡ್ರೆಡ್ ವೈಟಿಗೆ ರೂ. 32 ಕ್ರಯವಿರುವದಾಗಿ ತಿಳಿಯುತ್ತೇವೆ.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಮೀ ಟಿಂಗು ತಾರೀಕು 31-10-38 ಮತ್ತು 1-11-38 ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ಬೋರ್ಡಿನ ಪ್ರೆಸಿಡೆಂಟರ ಅಧ್ಯಕ್ಷತೆಯ ಲ್ಲಿ ನಡೆಯಿತು.

ಹಾಕಿ ಪಂಥದಾಟಕ್ಕಾಗಿ ಶ್ರೀ ಕೊ ಡಂದೇರ ನಂಜಪ್ಪ ಬಿ. ಎ. ಯವರು ಒಂ ದು ಬೆಳ್ಳಿಯ ಕಪ್ಪನ್ನು ಕೊಟ್ಟಿರುವರೆಂ ದೂ, ಈ ಪಂಥದಾಟವು ಕೊಡಗು ಎತ್ಲೆಟಿ ಕ್ ಸಂಸ್ಥೆಯ ಆಶ್ರಯದಲ್ಲಿ ಜನವರಿ ತಾ. 15 ರ ನಂತರ ನಡೆಯಬಹುದೆಂದೂ ಆ ಸಂಸ್ಥೆಯ ಕಾರ್ಯದರ್ಶಿಯವರು ತಿಳಿಸು ತ್ತಾರೆ.

ಸರಕಾರದಿಂದ ಕೊಡುವ ದೀರ್ಘ ಕಂತಿನ ಸಾಲಗಳಿಗೆ ಅರ್ಜಿ ಮಾಡುವ ಕ ಡೇ ತಾರೀಕು ಅಕ್ಟೋಬರ್ ಅಂತ್ಯದ ವ ರೆಗಿತ್ತು. ಆದರೆ ಎಷ್ಟೋ ಜನರಿಗೆ ಅ ರ್ಜಿ ಫಾರಂಗಳು ಸಿಕ್ಕದೆ, ಸಕಾಲದಲ್ಲಿ ಅ ರ್ಜಿ ಮಾಡಲು ತೊಂದರೆಯಾದ್ದರಿಂದ ಈ ಅವಧಿಯನ್ನು ನವಂಬರು 15 ರ ವರೆಗೆ ಮುಂದರಿಸಿರುವರಲ್ಲದೆ ಈ ಅರ್ಜಿ ಫಾರಂ ಗಳು ಎಲ್ಲಾ ನಾಡು ಖಜೇರಿಗಳಲ್ಲಿ ಸಿಗು ವವೆಂದೂ ಪ್ರಕಟಿಸಲಾಗಿದೆ.

ಪೊಲೀಸ್ ಸುಪರಿಂಟೆಂಡೆಂಟರ ಆ ಫೀಸಿನ ಹೆಡ್ ಗುಮಾಸ್ತರಾದ ಶ್ರೀ ಬಡು ವಮಂಡ ಕುಶಾಲಪ್ಪನವರು ತಾರೀಕು 1-5-39 ರಿಂದ ತಮ್ಮ ಉದ್ಯೋಗದಿಂದ ನಿವೃತ್ತರಾಗುವ ಕಾರಣ ಈ ತಾ. 1ರಿಂದ ಆರು ತಿಂಗಳು ರಜೆಯಲ್ಲಿ ಹೋಗಿರುವ ರೆಂದೂ, ಕಳೆದ ತಾ. 31 ರಲ್ಲು ಅವರಿಗೆ ಅವರ ಸಹದ್ಯೋಗಿಗಳು ಮತ್ತು ಸ್ನೇಹಿತ ರು ಒಂದು ಸತ್ಕಾರ ಕೂಟ ಏರ್ಪಡಿಸಿದ್ದ ರೆಂತಲೂ, ಖಾಲಿಯಾದ ಈ ಸ್ಥಳವನ್ನು ಬ ರುವ ಮಾರ್ಚಿ ತಿಂಗಳ ವರೆಗೆ ಭರ್ತಿಮಾ ಡುವುದಿಲ್ಲವೆಂತಲೂ ವರ್ತಮಾನ.

ವೀರಾಜಪೇಟೆ.

ಈ ವಾರ ಇಲ್ಲಿ ಭತ್ತ ಗಾಡಿಗೆ ರೂ. 46 ರ ವರೆಗೆ ಕ್ರಯವಿತ್ತೆಂದು ತಿಳಿಯಬ ರುತ್ತದೆ.

ನಾಂಗಾಲ ಗ್ರಾಮದ ಮೆ. ಕಂಬೀ ರಂಡ ಗಣಪತ್ತಿಯವರು ಕಳೆದ ತಾ. 27 ರಲ್ಲಿ ವೀರಾಜಪೇಟೆ ಆಸ್ಪತ್ರೆಯಲ್ಲಿ ಶಿವಾ ಧೀನರಾದರೆಂದು ತಿಳಿಯಲು ವ್ಯಸನಪಡು ತ್ತೇವೆ.

ಹುದಿಕೇರಿ.

ತಾ. 31-10-38 ರಲ್ಲಿ ಶ್ರೀ ಇಟ್ಟಿ ರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಒಂ ದು [illegible] ದು, ಕೊಡಗು ದೇಶದ ಪಟೇಲರುಗಳ ಸಂ ಬಳದ ಖೋತೆ ಬಗ್ಗೆ ಗಜೆಟನಲ್ಲಿ ಪ್ರಕಟ ವಾದ ಇಸ್ತಿಹಾರುನಾಮೆಯನ್ನು ವಿರೋ ಧಿಸಿ ಅದನ್ನು ರದ್ದು ಮಾಡಬೇಕೆಂದು ಚೀ ಫ್ ಕಮಿಷನರನ್ನು ಕೇಳಿಕೊಳ್ಳಲು ಠರಾ ವು ಮಂಜೂರು ಮಾಡಲಾಯಿತು.

ಭಾಗಮಂಡಲ.

ಈ ತಾ. 7 ರಲ್ಲಿ ಇಲ್ಲಿಯ ಶ್ರೀ ಭಾ ಗಂಡೇಶ್ವರ ದೇವಸ್ಥಾನದಲ್ಲಿ ಟೆಂಪಲ್ ಕ ಮಿಟಿ ಪ್ರೆಸಿಡೆಂಟರಾದ ಶ್ರೀ ಕೆ. ಕಾಳಪ್ಪ ನವರ ಅಧ್ಯಕ್ಷತೆಯಲ್ಲಿ 'ಶ್ರೀಮೂಲ ಕಾ ವೇರಿ ಸನಾತನ ಧರ್ಮ ಪಾಠ ಶಾಲಾ' ಎಂಬ ಸಂಸ್ಥೆಯನ್ನು ತೆರೆಯುವ ಉದ್ದಿಶ್ಯ ಒಂದು ಸಾರ್ವಜನಿಕ ಮೀಟಿಂಗು ಸೇರು ವದೆಂದೂ, ಎಲ್ಲರೂ ಭಾಗಿಗಳಾಗಬಹು ದೆಂದೂ ತಿಳಿಸುತ್ತಾರೆ.

ಫ್ರೇಜರ್‌ಪೇಟೆ.

ಇಲ್ಲಿಯ ಸಿದ್ಧಿವಿನಾಯಕ ದೇವಾಲ ಯದ ರಥೋತ್ಸವವು ತಾ. 9 ರಿಂದ 14ರ ವರೆಗೆ ನಡೆಯುವದೆಂದೂ, ತಾರೀಕು 11 ರಿಂದ 14 ರ ವರೆಗೆ ದನಗಳ ಪ್ರದರ್ಶನ ನಡೆಯುವದೆಂದೂ, ಎಲ್ಲರಿಗೂ ಆಹ್ವಾನವಿ ದೆಯೆಂದೂ ತಿಳಿದುಬರುತ್ತದೆ.

ಗಜೆಟ್ ವರ್ತಮಾನ.

ಕಳೆದ ತಿಂಗಳಲ್ಲಿ ಕೊಡಗಿನಲ್ಲಿ 361 ಜನನಗಳೂ, 338 ಮರಣಗಳೂ ಸಂಭವಿ ಸಿದವೆಂದು ಪ್ರಕಟವಾಗಿದೆ.

ವ್ಯವಸಾಯಗಾರರ ಸಾಲ ನಿವಾರಣೆ ಗಾಗಿ ಕೊಡುವ ಸರ್ಕಾರಿ ಸಾಲದ ಅರ್ಜಿ ಗಳನ್ನು ವಿಚಾರಿಸುವ ಹಕ್ಕು ಅಲ್ಲಲ್ಲಿಯ ಸುಭೇದಾರರಿಗೂ, ಪಾರುಪತ್ಯಗಾರರಿಗೂ ಕೊಡಲಾಗಿದೆ.

ಕೊಡಗು ಲ್ಯಾಂಡ್ ಮತ್ತು ರೆವೆನ್ಯು ರೆಗ್ಯುಲೇಶನಿನ ನಿಬಂಧನೆಗಳಿಗೆ ಹಲವು ಕ ರಡು ತಿದ್ದುಪಡಿಗಳು ಈ ತಿಂಗಳ ಗಜೆಟಿ ನಲ್ಲಿ ಪ್ರಕಟವಾಗಿವೆ. ಅವುಗಳಿಗೆ ಆ ಕ್ಷೇಪಣೆ ಯಾ ಸಲಹೆಗಳನ್ನು 2 ತಿಂಗಳೊ ಳಗೆ ಚೀಫ್ ಕಮಿಷನರಿಗೆ ಕಳುಹಿಸಿದರೆ ಆಲೋಚಿಸಲಾಗುವದೆಂದೂ ಸೂಚಿಸಲಾ ಗಿದೆ.

1939 ನೇ ಏಪ್ರಿಲ್ 1 ರಿಂದ ಕೊಡ ಗಿನ ಶಾಲೆಗಳಲ್ಲಿ ಈ ಕೆಳಗಿನ ಮೇರೆ ಸ್ಕೂಲ್ ಫೀಜು ಹೆಚ್ಚಿಸಲ್ಪಡುವದು-ಹೈಸ್ಕೂಲುಗಳಲ್ಲಿ 4, 5 ಮತ್ತು 6 ನೇ ಫಾರ್ಮುಗಳಿಗೆ-ವರ್ಷಕ್ಕೆ ರೂ. 34; 1, 2, ಮತ್ತು 3 ನೇ ಫಾರ್ಮುಗಳಿಗೆ-ವರ್ಷಕ್ಕೆ ರೂ. 22; ಹಯರ್ ಎಲಿಮೆಂಟರಿ ಶಾಲೆ ಗಳಲ್ಲಿ-8 ನೇ ಸ್ಟಾಂಡಾರ್ಡಿಗೆ-ವರ್ಷಕ್ಕೆ ರೂ. 10; 6 ಮತ್ತು 7 ನೇ ಸ್ಟಾಂಡಾ ರ್ಡುಗಳಿಗೆ-ವರ್ಷಕ್ಕೆ ರೂ. 5. ಹೊಸ ದಾಗಿ ಸೇರುವ ವಿದ್ಯಾರ್ಥಿಗಳಿಗೆ ಮೇಲಿನ ಫಾರ್ಮುಗಳಿಗೆ ದಾಖಲಾತಿ ಫೀಜು ರೂ. 2; ಕೆಳಗಿನ ಫಾರ್ಮುಗಳಿಗೆ ರೂ. 1-8-0.

ಹಿಂದೂದೇಶ.

ಕುಂಭಕೋಣ ಪ್ರಾಂತ್ಯದಲ್ಲಿ ಮಳೆ [illegible] ಹೊಕಾರವೆದ್ದಿದೆ. ವಿಪ್ಲವ ಗ್ರದವರು ಕೆಲವರು ಕಾವೇರಿಯಲ್ಲಿ ಸೊಂಟದ್ದವ ನೀರಲ್ಲಿ ನಿಂತು, ಮಳೆ ಬ ರುವಂತೆ ವರುಣಜಪಕ್ಕೆ ಆರಂಭಿಸಿದ್ದಾರೆ.

ಹೈದೆರಬಾದು ಸಂಸ್ಥಾನದಲ್ಲಿ ಅಲ್ಲಿನ ಸ್ಟೇಟ್ ಕಾಂಗ್ರೆಸಿನ ಪ್ರಥಮ ಸರ್ವಾ ಧಿಕಾರಿಗಳಾದ ಸ್ವಾಮಿ ರಾಮಾನಂದ ತೀ ರ್ಥರ ಕೈದಾಗಿಸಿ ಅಲ್ಲದೆ 19 ಮಂದಿ ಆರ್ಯಸಮಾಜದವರ ದಸ್ತಗಿರಿಯೂ ನಡೆ ದಿದೆ.

ಪಂಡಿತ ಜವಾಹರಲಾಲ ನೆಹರುಗಳು ಪುತ್ರಿಯೊಂದಿಗೆ ಪ್ಯಾರಿಸ್ ಮಾರ್ಗವಾಗಿ ಕೈರೋ ನಗರಕ್ಕೆ ವಿಮಾನದ ಮೂಲಕ ಹೊರಟರು. ಇವರು ಎರಡು ದಿನ ಮಿ. ನೆಹಾಸಪಾಶಾರ ಅತಿಥಿಗಳಾಗಿರುವರು.

ಕಲ್ಕತ್ತ ನಗರಸಭೆಯ ಕೈಕೆಳಗಿದ್ದ ಮತ್ತು ದಿಗ್ಬಂಧಿತರಾದ ಡೆಪ್ಯುಟ್ಯೂಗಳನ್ನು ನಗರ ಸಭೆಯ ಕೆಲಸಕ್ಕೆ ಪುನಹ ತೆಗೆದು ಕೊಳ್ಳಬೇಕಾಗಿಯೂ, ಅವರಿಗೆ ಎರಿದ ಸಂ ಬಳವನ್ನು ತೆರಬೇಕಾಗಿಯೂ ನಿರ್ಧಾರ ವಾಯಿತು.

ಮುಂಬರುವ ಮಾರ್ಚಿ ತಿಂಗಳಲ್ಲಿ ಮ ಹಾತ್ಮ ಗಾಂಧಿಯವರು ಗಡಿನಾಡಿಗೆ ಇ ನ್ನೊಂದಾವರ್ತಿ ಭೇಟಿ ಕೊಡುವರೆಂದೂ, ಆ ಸಂದರ್ಭದಲ್ಲಿ ಕೆಂಪಂಗಿಗಳ ತರಬೇತಿ ಯ ಕೇಂದ್ರವನ್ನು ಉದ್ಘಾಟಿಸಿ ಮಾಡುವ ರೆಂದೂ ತಿಳಿದು ಬರುತ್ತದೆ.

ಗವರ್ನರರಾದ ಲಾರ್ಡ್ ಎರಸ್ಕೈನ್ ರವರು ಮಧುರಾ ಜಿಲ್ಲೆಯ ತಮ್ಮ ಪ್ರವಾ ಸ ಕಾಲದಲ್ಲಿ ಕಾಂಗ್ರೆಸ್ ಮಂತ್ರಿ ವರ್ಗ ದ ಕೆಲಸ ಕಾರ್ಯಗಳನ್ನೂ, ಅವರ ಅತ್ಯು ನ್ನತ ಕರ್ತವ್ಯ ದೃಷ್ಟಿಯನ್ನೂ ಕೊಂಡಾಡಿ ತಾವು ತಮ್ಮ ಪ್ರೋತ್ಸಾಹ ಮತ್ತು ಸಹ ಕಾರವನ್ನು ಅವರಿಗೆ ಕೊಟ್ಟದ್ದೇವೆ ಎಂದು ನುಡಿದರು.

ಸಂಯುಕ್ತ ಪ್ರಾಂತದಲ್ಲಿ ಗ್ರಾಮೋ ವೃದ್ಧಿ ವಾರವನ್ನು ಆಚರಿಸುವ ಕೃತ್ಯ ಟ್ಟಿರುವರು. ಈ ವಾರದಲ್ಲಿ ಉದ್ಯೋ ಸ್ಥರೂ, ಉದ್ಯೋಗಸ್ಥರಲ್ಲದವರೂ, ಗ್ರಾಮಗಳಿಗೆ ಹೋಗಿ ಗ್ರಾಮೋಭಿ ಕೆಲಸ ಕೈಕೊಳ್ಳಬೇಕು. ಈ ವಾ ತಾರೀಕು 1 ರಿಂದ ಪ್ರಾರಂಭವಾಗಿದೆ ದೂ, ಪಟ್ಟಣವಾಸಿಗಳು ಗ್ರಾಮಗಳಿಗೆ ಕ ಡೆದಿರುವರೆಂದೂ, ಗ್ರಾಮವಾಸಿಗಳೂ ರನ್ನು ಹಿಂಬಾಲಿಸಿ ಕೆಲಸ ಮಾಡುತ್ತಿ ರೆಂದೂ ತಿಳಿದುಬರುತ್ತೆ.

ಕಾಂಗ್ರೆಸ್ ಸಭೆಯವರು ದೇಶದ ಯುದ್ಧರಂಗಕ್ಕೆ ವೈದ್ಯ ಸ ವನ್ನು ಹೇಗೆ ಕಳುಹಿಸಿಕೊಟ್ಟರುತ್ತ ಆದರಂತೆಯೇ ರುವಾನಿಯ ಆಯು ದಿಕ್ ಸ್ವಾಸ್ಥಿಕ ಸಂಘದವರು ಯ ದ್ಧರಂಗಕ್ಕೆ ವೈದ್ಯರುಗಳನ್ನು ಕಳುಹಿ ಕೆಂದು ನಿಶ್ಚೈಸಿರುತ್ತಾರೆ. ಅವ ಚೀನಾ ದೇಶದ ಪ್ರಧಾನ ರಾಯ ಯೊಡನೆ ಪತ್ರವ್ಯವಹಾರಗಳನ್ನು ತ್ತಿದ್ದಾರೆ. ಈ ವೈದ್ಯ ಪಡೆಯು ನಾ ಯುದ್ಧರಂಗದಲ್ಲಿ ಆಪತ್ತಿಗೆ ಯಾದವರಿಗೆ ಆಯುರ್ವೇದ ವೈದ್ಯ ತ್ಯಾ ಚಿಕಿತ್ಸೆ ಮಾಡುವವರಾಗಿದ್ದಾ

ಈ ವರ್ಷದ ಕಾಂಗ್ರೆಸ್ ಮಹಾ ನವು ಮಹಾಕೋಸಲದ ತ್ರಿಪುರಿಯ ಯುವುದಷ್ಟೆ. ಇದರ ಸಿದ್ಧತೆಗಳಿಗಾ 1ರಿಂದ ಚಂದಾ ಹಣ ಎತ್ತಲು ಪ್ರ ಸಿರುವರು. ತಾ. 10ರಿಂದ ಕಾ ವಾರ ಎಂಬದನ್ನು ಆಚರಿಸುವರು ಸಂದರ್ಭದಲ್ಲಿ ಲಕ್ಷೋಪಲಕ್ಷ ರೂ. ಸಂಗ್ರಹವಾಗಬಹುದೆಂದೂ, ತ್ರಿಪು ವೇಶನವನ್ನು ಫೆಬ್ರವರಿ 5ರಲ್ಲಿ ಮಾರ್ಚಿ 4ರಲ್ಲಿ ನಡೆಸಬೇಕೆಂದು ಕೋಸಲ ಕಾಂಗ್ರೆಸ್ ಕಮಿಟಿಯವ ರ್ಕಿಂಗ್ ಕಮಿಟಿಗೆ ಶಿಫಾರಸು ಮಾಡಿರು

ವಿದೇಶ

ಜರ್ಮನಿಯ ಹಳೇ ಕಾಲನಿ ಳಿಕೆ 'ಸರಿ' ವಿಂದ್ಯು ಪೋಲೇಂಡ್ ಜರ್ಮನಿಯ ಕಡೆ ನಿಂತಿದ್ದಾರೆ. ರ್ಚುಗಲ್ಲಿನ ಸಹಾನುಭೂತಿ ಎತ್ತ ಎಂಬುದು ಪ್ರಕಟವಾಗಿಲ್ಲವಾದರೂ ಏನೋ ಒಂದು ಗೊಳೆಗಂಟು ನಡೆಯ ತೆ ತೋರುತ್ತದೆ. ಈ ಪ್ರಭೆಯ್ಯ, ತ್ಸ ನೀಕವು, ಬ್ರಿಟಿಷರ ಕೈಕೆಳಗೇ ಉ ಬೇಕೆಂದು ಅಲ್ಲಿನ ಯೂಕೋಪಿಯ ಳವಳವೆದ್ದಿದೆ.

ಪೂರ್ವ ದೇಶದಲ್ಲಿ ಬ್ರಿಟಿಷರಿ ಪ್ರಾಮುಖ್ಯತೆ ಇಲ್ಲ! ಹೀಗೆಂದು ಜ ನ ಕಡೆಯ ಉಯುಭಾರಿಗಳೊಬ್ಬರು ಳುತ್ತಿದ್ದಾರೆ. '10 ವರ್ಷಗಳಲ್ಲಿ ದ ಆಡಳಿತೆಯ ವ್ಯವಸ್ಥೆಯನ್ನು, ಕದ ರಾಜ್ಯಭಾರ ಪದ್ಧತಿಯಂತೆ ಎ ಸಲಾಗುತ್ತದೆ. ಪಾಶ್ಚಾತ್ಯ ರಾಷ್ಟ್ರಗಳ ಡನೆ, ಈ ದಿಗ್ವಿಜಯದ ಫಲವನ್ನು ಹಂ ಕೊಂಡು ಉಣ್ಣಲು ಜಪಾನು ತಯಾರಾ ಎಂದೂ ಅವರೇ ಪ್ರಕಟಿಸಿರುತ್ತಾರೆ. ದ್ಯ ಜಪಾನೀಯರು ಚೀನದಲ್ಲಿ ಆಕ್ರಮಿ ರುವ ಪ್ರದೇಶವು, ಜಪಾನ್ ಸಾಮ್ರಾ ದ ಎರಡರಷ್ಟು ಎಂದು ಪ್ರಕಟವಾಗಿದೆ.

ಕೊಡಗು ಡಿಸ್ಟ್ರಿಕ್ಟ್ ಬೋರ್ಡ್ ವಿಾಟಿಂಗು.

...ಡಗು ಡಿಸ್ಟ್ರಿಕ್ಟ್ ಬೋರ್ಡಿನ ವಿಾ
ಕಳೆದ ಅಕ್ಟೋಬರು ತಾ. 31ರಲ್ಲಿ
ಮಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ
ಭವಾಯಿತು. ಎಲ್ಲಾ ಮೆಂಬರ್ರು
ಹಾಜರಿದ್ದರು. ಬೋರ್ಡಿನ ಪ್ರೆಸಿ
ಾದ ಶ್ರೀಯುತ ಪಿ. ಐ ಬೆಳ್ಯಪ್ಪನ
ಧ್ಯಕ್ಷರಾಗಿದ್ದರು. ವಿಾಟಿಂಗು ಸು
ವುದಕ್ಕೆ ಮೊದಲು ಎಲ್ಲರೂ ಎ
ು 'ವಂದೇ ಮಾತರಂ' ರಾಷ್ಟ್ರೀಯ
ು ಹಾಡಲ್ಪಟ್ಟಿತು.

ಕಳೆದ ವಿಾಟಿಂಗಿನ ಪ್ರೊಸೀಡಿಂ
ಒಪ್ಪಲಾಯಿತು.

38-39ರ ಬಡ್ಜೆಟ್ಟಿನಲ್ಲಿ ಖರ್ಚು
ಕ್ಕಿಂತ 18,000 ರೂ. ಹೆಚ್ಚಾಗಿ
ಿಂದಲೂ, ಸರ್ಕಾರದವರು 7,000
ಾ ಕಡಿಮೆ ಮಾಡುವ ಸಂಭವ
ದರಿಂದಲೂ ಆದರಲ್ಲಿರುವ ಹೊಸ
ಳನ್ನೆಲ್ಲಾ ಬಾಕಿ ಮಾಡಿ, ವಾಡಿಕೆ
ರ್ಚಿನಲ್ಲಿಯೂ ಸಾಧ್ಯವಾದಷ್ಟು
ಮಾಡಬೇಕೆಂದು ಚೀಫ್ ಕಮಿಶ
ರೆದ ಪತ್ರವನ್ನು ಓದಲಾಯಿತು.
ಟ್ಟನ್ನು ಪುನಹ ಆಲೋಚಿಸಿ,
ಸಾಧಕತ್ವಕ್ಕೆ ಕುಂದಕ ಬಾರದಂ
ಇಲಾಖೆಯಲ್ಲಿ ರೂ. 2,800
ಶ್ಯ. ಇಲಾಖೆಯಲ್ಲಿ ರೂ. 1,500;
ಇಲಾಖೆಯಲ್ಲಿ 1,000 ಮತ್ತು
ರ್ಡು ಪಂಚಾಯಿತಿಗೆ ವಜವಾದ
ಅವಕ್ಕೆ ಕೊಡುವ ರೂ. 250
ಕಡಿಮೆ ಮಾಡಲ್ಪಟ್ಟದ್ದಲ್ಲದೆ ಕಳೆ
ಮಂಜೂರು ಮಾಡಿದ್ದ 9,000
ಹೊಸ ಕೆಲಸಗಳಲ್ಲಿ ಅತ್ಯವಶ್ಯವಾ
ಳನ್ನು ಮಾತ್ರ ಈ ವರ್ಷ ನಡಿಸುವಂ
ಶ್ಯಯಿಸಿ, ಆ ಮೊಬಲಗಿನಲ್ಲಿ ರೂ.
ಕಡಿಮೆ ಮಾಡಲು ತೀರ್ಮಾನಿಸಿ
ರೆ ರೂ. 11,500 ಖರ್ಚು ಹೋ
ಾಡಲಾಯಿತು. ಇದರಲ್ಲಿ ಕಳೆದ
ಶ್ಚಯಿಸಿದ ಶಾಲೆಗಳಿಗೆ ಕೊಡುವ
ಗ್ರಾಂಟುಗಳು, ಹೊಸ ಆಸ್ಪತ್ರೆಗಳು
ಗ್ರಾಮಾಂತರ ರಸ್ತೆಗಳು ಮಂಜೂ
ಾಡಲ್ಪಟ್ಟವು.

. ಬೋರ್ಡಿನ ಈಗಿನ ಆರ್ಥಿಕ ಹೀನ
ು ಕಾರಣ ಸರ್ಕಾರದವರು ಬೋ
ಕೊಡುವ ಗ್ರಾಂಟನ್ನು ಸ್ವಲ್ಪವೂ ಕ
ಮಾಡಬಾರದೆಂದು ಚೀಫ್ ಕಮಿಶ
ನ್ನು ಬೋರ್ಡು ಕೇಳಿಕೊಳ್ಳುತ್ತದೆ' ಎಂ
ಮೆ. ರಾಮಶೆಟ್ಟಿಯವರು ಸೂಚಿಸಿದ
ವನ್ನು ಮೆ. ಎಂ. ಎಸ್. ಸೋಮಯ್ಯ
ರು ಮತ್ತು ಸಿ. ಯಂ. ಪೂಣಚ್ಚನವ
ಅನುಮೋದಿಸಿದರು. ಠರಾವಿಗೆ ಚು
ಿತ ಮೆಂಬರುಗಳೆಲ್ಲರೂ ಪರವಾಗಿ
ು ಮಾಡಿ, ಯಾರೂ ವಿರೋಧವಿಲ್ಲದ್ದ
ದ ಠರಾವು ಪಾಸಾಯಿತು.

4. 1939-40ನೇ ವರ್ಷದ ಬಡ್ಜೆ
ವಿಾಟಿಂಗಿಗೆ ಮುಂಚಿತವಾಗಿ-ಬೋ
ರ್ಡಿನ ಆದಾಯವನ್ನು ಹೆಚ್ಚಿಸುವ ವಿಧಾ
ಮತ್ತು ಖರ್ಚು ಜೋತೆ ಮಾಡುವ ರೀ
ಗಳನ್ನು ಕಂಡು ಹಿಡಿದು ರಿಪೋರ್ಟು
ಮಾಡಲು ಏಳು ಮೆಂಬರುಗಳ ಒಂದು ಕ
ಮಿಟಿ ನೇಮಿಸುವಂತೆ ತೀರ್ಮಾನಿಸಲಾ
ಯಿತು.

ಓಟಿನ ಮೂಲಕ ಈ ಕೆಳಗಿನ ಮಹ
ಯರು ಕಮಿಟಿ ಮೆಂಬರುಗಳಾಗಿ ಆರಿ
ಸಲ್ಪಟ್ಟರು:-(1) ಬೋರ್ಡಿನ ಅಧ್ಯಕ್ಷರು (ಕನ್‌ವೀನರ್), (2) ಬೋರ್ಡಿನ ಉಪಾ
ಧ್ಯಕ್ಷರು, (3) ಅಸಿಸ್ಟೆಂಟ್ ಕಮಿಶನರು,
(4) ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರು, (5)
ಕಾಕಮಾಡ ಗಣಪತಿಯವರು, (6) ಚೆ
ಪ್ಪುಡೀರ ಪೂಣಚ್ಚನವರು, ಮತ್ತು (7)
ಹೆಚ್. ಎಂ. ಪುಷ್ಪಣ್ಣನವರು.

5. (1) ಸಂಪಾಜೆ ಸುಂಕದಕಟ್ಟೆ ಕಂ
ಟ್ರಾಕ್ಟರರು (ರೂ. 58), (2) ಸಿದ್ದಾಪುರ
ಮಾರ್ಕೆಟ್ ಕಂಟ್ರಾಕ್ಟರರು (ರೂ. 301)
(3) ಆನೆಚೌಕೂರು ಟೋಲ್‌ಗೇಟ್ ಕಂ
ಟ್ರಾಕ್ಟರರು (ರೂ. 2,450), (4) ಗದ್ದಿ
ಗೆ ಟೋಲ್‌ಗೇಟ್ ಕಂಟ್ರಾಕ್ಟರರು (ರೂ.
685), (5) ಶನಿವಾರಸಂತೆ ಮಾರ್ಕೆಟ್
ಕಂಟ್ರಾಕ್ಟರರು (ರೂ. 50), (6) ನಿಲು
ವಾಗಲು ಟೋಲ್‌ಗೇಟ್ ಕಂಟ್ರಾಕ್ಟರರು
(ರೂ. 100), (7) ಫ್ರೇಜರ್‌ಪೇಟೆ ಟೋ
ಲ್‌ಗೇಟ್ ಕಂಟ್ರಾಕ್ಟರರು (ರೂ. 410),
(8) ರಾಂಪುರ ಮಾರ್ಕೆಟ್ ಕಂಟ್ರಾಕರರು
(ರೂ. 30) (9) ಶಿರಂಗಾಲ ಟೋಲ್‌ಗೇ
ಟ್ ಕಂಟ್ರಾಕ್ಟರರು (ರೂ. 800), (10)
ಹೆಬ್ಬುಲುಸೆ ಟೋಲ್‌ಗೇಟ್ ಕಂಟ್ರಾಕ್ಟರ
ರು (ರೂ. 42), (11) ಮೂವುಕೂಟ ಟೋ
ಲ್‌ಗೇಟ್ ಕಂಟ್ರಾಕ್ಟರರು (ರೂ. 575),
(12) ಮೂರ್ನಾಡು ಮಾರ್ಕೆ
ಕ್ಟರರು (ರೂ. 50), (13) ಗೋಣಿಕೊ
ಪ್ಪಲು ಮಾರ್ಕೆಟ್ ಕಂಟ್ರಾಕ್ಟರರು (ರೂ.
200), (14) ಸುಂಟಿಕೊಪ್ಪ ಮಾರ್ಕೆಟ್
ಕಂಟ್ರಾಕ್ಟರರು (ರೂ. 169), ಇವರುಗಳು
ಪ್ಲೇಗುವಗೈರಿಕಾರಣಗಳಿಂದ ತಮಗೆ ನಷ್ಟ
ಉಂಟಾದ್ದರಿಂದ ಮೇಲೆ ಕಾಣಿಸಿದ ಮೊಬ
ಲಗುಗಳನ್ನು ಮಾಫಿ ಬಿಡಬೇಕೆಂದು ಬರ
ಕೊಂಡ ಅರ್ಜಿಗಳು ಪ್ರತ್ಯೇಕವಾಗಿ ಓದ
ಲ್ಪಟ್ಟವು. ಇವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಚರ್ಚಿಸಿ ಯಾರಿಗೂ ಮಾಫಿ
ಬಿಡಲಿಕ್ಕಾಗುವುದಿಲ್ಲವೆಂದು ತೀರ್ಮಾನಿ
ಸಲಾಯಿತು.

6. ಡಿ. ಬೋರ್ಡಿನ ನೌಕರರಿಗೂ ಸ
ರ್ಕಾರಿ ನೌಕರರ ನಡತೆ ಮತ್ತು ಶಿಸ್ತಿನ ನಿ
ಬಂಧನೆಗಳನ್ನೇ ಅನುಸರಿಸುವಂತೆ ಕಮಿಷ
ನರು ಬರೆದ ಸಿಫಾರಸು ಪತ್ರವನ್ನು ಓದಿ
ಆವರ ಸಲಹೆಯನ್ನು ಒಪ್ಪಲಾಯಿತು.

7. ಚಿಕ್ಕ ಪೇಟೆಗಳು ಮತ್ತು ಗ್ರಾಮಾಂ
ತರಗಳಲ್ಲಿ ಶುಚಿತ್ವವನ್ನು ಕುರಿತು ಸಿವಿಲ್
ಸರ್ಜನರು ಕಳುಹಿಸಿದ ಕೆಲವು ನಿಬಂಧನೆಗ
ನ್ನು ಓದಿ ಅವುಗಳನ್ನು ಅಜಮಾಯಿಸಲು
ಬೋರ್ಡಿನ ಅಧ್ಯಕ್ಷರು, ಉಪಾಧ್ಯಕ್ಷ
ರು ಮತ್ತು ಸಿವಿಲ್ ಸರ್ಜನರಿಂದ ಕೂಡಿ
ದ ಒಂದು ಕಮಿಟಿಯನ್ನು ನೇಮಕ ಮಾ
ಡಲಾಯಿತು.

8. ಹೆಬ್ಬುಲುಸೆ ಟೋಲ್ ಗೇಟನ್ನು
ವಜಾ ಮಾಡುವ ವಿಷಯ ಇನ್ನೊಂದು
ವಿಾಟಿಂಗಿಗೆ ಮುಂದರಿಸಿಡಲಾಯಿತು.

9. ಹೆಬ್ಬಾಲೆ ಶಾಲೆಯ ಏಳನೇ ತರ
ಗತಿಯಲ್ಲಿ ಮಕ್ಕಳು ಬಹಳ ಕಡಿಮೆಯಾ
ದ ಕಾರಣ, ಆ ತರಗತಿಯನ್ನು ಮುಚ್ಚು
ಬೇಕೆಂದು ಶಾಲಾ ಇನ್ಸ್‌ಪೆಕ್ಟರರು ಬರೆದ
ಪತ್ರವನ್ನು ಓದಲಾಯಿತು. ಆಲ್ಲಿಯ
ಗ್ರಾಮಸ್ಥರಿಗೆ ಶಾಲೆ ಮಕ್ಕಳನ್ನು ಹೆಚ್ಚಿ
ಸಲು ಮೂರು ತಿಂಗಳು ಸಮಯ ಕೊ
ಟ್ಟು ನಂತರ ಆಲೋಚಿಸುವಂತೆ ತೀರ್ಮಾ
ನವಾಯಿತು.

10. ಕಳೆದ ವರ್ಷ ದೊಡ್ಡ ಬಳ್ಳಾಪು
ರಕ್ಕೆ ಗ್ರಾಮಾಭಿವೃದ್ಧಿ ವಿಷಯವಲ್ಲಿ ತರ
ಬೇತಿಗೆ ಕಳುಹಿಸಲ್ಪಟ್ಟಿದ್ದ ಇಬ್ಬರು ಉ
ಪಾಧ್ಯಾಯರುಗಳ ಪ್ರಯಾಣದ ಭತ್ಯ
ರೂ. 24-14-0 ಮಂಜೂರ್ಮಾಡಲಾ
ಯಿತು.

11. ಸೋಮವಾರಪೇಟೆನಾಡಿನ ತೋ
ಳೂರು ಶೆಟ್ಟಳ್ಳಿ ಶಾಲೆಯಲ್ಲಿ ಮಕ್ಕಳು ಬ
ಹಳ ಕಡಿಮೆಯೊದ ಕಾರಣ ಅದನ್ನು ಕೂ
ತಿ ಗ್ರಾಮಕ್ಕೆವರ್ಗಾಯಿಸುವುದು ಉತ್ತಮ
ವೆಂದು ಕಮಿಷನರು ಬರೆದ ಪತ್ರವನ್ನು ಓ
ದಲಾಯಿತು. ಮಕ್ಕಳನ್ನು ಹೆಚ್ಚಿಸಲು ಆ
ಲ್ಲಿಯವರಿಗೆ 3 ತಿಂಗಳ ಅವಧಿಕೊಟ್ಟು ನಂ
ತರ ಆಲೋಚಿಸುವಂತೆ ತೀರ್ಮಾನವಾ
ಯಿತು.

ಸಾಯಂಕಾಲ 5 ಗಂಟೆಗೆ ವಿಾಟಿಂಗ
ನ್ನು ಮುಂದರಿಸಿಡಲಾಯಿತು.

ಮರುದಿನ ಬೆಳಿಗ್ಯೆ 9 ಗಂಟೆಗೆ ವಿಾ
ಟಿಂಗು ಪುನಃ ಪ್ರಾರಂಭವಾಯಿತು.

12. ಭೆಟ್ಟದಳ್ಳಿ ರಸ್ತೆಯನ್ನು ಬೋ
ರ್ಡಿನವರು ವಹಿಸಿಕೊಂಡು ಅದರ ವಾರ್ಷಿ
ಕ ಖರ್ಚಿಗೆ ರೂ. 20 ಮಂಜೂರ್ಮಾಡಬೇ
ಕೆಂದು ಆ. ಕಮಿಷನರು ಬರೆದ ಪತ್ರ ಓದ
ಲಾಗಿ ಅದನ್ನು ಬರುವ ಬಡ್ಜೆಟ್ ವಿಾಟಿಂ
ಗಿಗೆ ಇಡಲಾಯಿತು.

13. ಸುಂಟಿಕೊಪ್ಪನಾಡು ಆಂದಗೋ
ವೆ ಗ್ರಾಮದಲ್ಲಿ ಬಾವಿ ತೋಡಿಸಿದ ಕಂ
ಟ್ರಾಕ್ಟರಿಗೆ ನಷ್ಟವಾದ ಕಾರಣ ಈ ಮೊ
ದಲು ಕೊಟ್ಟ ರೂ. 50 ಅಲ್ಲದೆ ಇನ್ನೂ
ರೂ 50 ಕೊಡಬೇಕೆಂದು ಬರೆದ ಕಮಿಷ
ನರವರ ಪತ್ರ ಓದಲಾಗಿ, ಹಾಗೆ ಕೊಡಲಿ
ಕ್ಕಾಗುವದಿಲ್ಲವೆಂದು ತೀರ್ಮಾನಿಸಲಾ
ಯಿತು.

14. ಬಿಳುಗುಂದ ಶಾಲೆಯ ಮಹ
ಮ್ಮದೀಯ ಉಪಾಧ್ಯಾಯರಿಗೆ ರೂ. 10
ಎಲೋವೆನ್ಸ್ ಮಂಜೂರ್ಮಾಡಬೇಕೆಂದು
ಶಾಲಾ ಇನ್ಸ್‌ಪೆಕ್ಟರರು ಬರೆದ ಪತ್ರ ಓದ
ಲಾಯಿತು. ಬಿಳುಗುಂದ ಮಹಮ್ಮದೀ
ಶಾಲೆಗೆ ಕೊಡುವ ರೂ. 10 ಗ್ರಾಂಟನ್ನು
ಅಲ್ಲಿಯ ಬೋರ್ಡಿನ ಶಾಲೆಗೆ ವರ್ಗಾಯಿ
ಸಿ ಅದರಿಂದ ಕನ್ನಡ ಮತ್ತು ಉರುದು
ಗೊತ್ತಿರುವ ಒಬ್ಬ ಮಹಮ್ಮದೀಯ ಉ
ಪಾಧ್ಯಾಯರನ್ನು ನೇವಿಸುವಂತೆ ತೀರ್ಮಾ
ನವಾಯಿತು.

15. ಬೋರ್ಡಿನ ಆಡಳಿತದಲ್ಲಿ
ರುವ ಮಾರ್ಕೆಟುಗಳಲ್ಲಿ ಮಾರುವ ಮಾಂಸ
ದ ದರ ನಿಶ್ಚಯಿಸಬೇಕೆಂದು ಸಿವಿಲ್ ಸ
ರ್ಜನರು ಬರೆದ ಪತ್ರ ಓದಲಾಯಿತು.
ಒಂದನೇ ತರಗತಿ ಮಾಂಸಕ್ಕೆ 9 ಆಣೆಯಂ
ತೆಯೂ, 2ನೇ ತರಗತಿ ಮಾಂಸಕ್ಕೆ 7 ಆಣೆ
ಯಂತೆಯೂ ದರ ನಿಶ್ಚಯಿಸುವಂತೆ
ತೀರ್ಮಾನಿಸಲಾಯಿತು.

16. ನಾಪೋಕ್ಲು ಆಸ್ಪತ್ರೆಯಲ್ಲಿರು
ವ ಸೂಲಗಿತ್ತಿಗೆ ಆಲ್ಲಿ ಹೆಚ್ಚಿನ ಹೆರಿಗೆ ಕೆಲ
ಸವಿಲ್ಲದ ಕಾರಣ ಅವಳನ್ನು ಮೂರ್ನಾಡಿ
ಗೆ ವರ್ಗಾಯಿಸಬೇಕೆಂದು ಸಿವಿಲ್ ಸರ್ಜ
ನರು ಬರೆದ ಪತ್ರ ಓದಲಾಯಿತು. ಆಲ್ಲಿ
ಗೆ ಹೆಚ್ಚಿನ ಅನುಭವವುಳ್ಳ ಒಬ್ಬ ಸೂಲಗಿ
ತ್ತಿಯನ್ನು ವರ್ಗಾಯಿಸಿ ಆರು ತಿಂಗಳ ವ
ರೆಗೆ ನೋಡಿ ನಂತರ ಈ ವಿಷಯ ತೀ
ರ್ಮಾನಿಸುವಂತೆ ನಿಶ್ಚಯಿಸಲಾಯಿತು.

17. ಫ್ರೇಜರ್‌ಪೇಟೆ ನರ್ಸಿಗೆ ಕೆಲಸ
ಕಡಿಮೆಯಾದ ಕಾರಣ ಅವಳನ್ನು ಶನಿವಾ
ರಸಂತೆಗೆ ವರ್ಗಾಯಿಸಬೇಕೆಂಬ ಸೂಚನೆ
ಯು ಚರ್ಚಿಸಲ್ಪಟ್ಟು ಹಾಗೆ ಮಾಡುವದು
ಆವಶ್ಯವಿಲ್ಲವೆಂದು ತೀರ್ಮಾನವಾಯಿತು.

18. ಸುಂಟಿಕೊಪ್ಪ ಮಾರ್ಕೆಟಿನ ಬ
ಳಿ ರಸ್ತೆಗೆ ಕಲ್ಲು ಹಾಕಿಸಲು ರೂ. 90
ಮಂಜೂರ್ಮಾಡಬೇಕೆಂದು ಅಲ್ಲಿಯ ಪಾ
ರುಪತ್ಯಗಾರರ ಪತ್ರ ಓದಲಾಗಿ, ಅದನ್ನು
ಬರುವ ಬಡ್ಜೆಟ್ ವಿಾಟಿಂಗಿಗೆ ಮುಂದರಿಸಿ
ಡಲು ತೀರ್ಮಾನವಾಯಿತು.

19. ಡಿ. ಬೋರ್ಡಿನ ಶಾಲೆಗಳ ಬಾ
ಲಚಮೂ ಸಂಘವನ್ನು ಹಿಂದುಸ್ಥಾನ ಸ್ಕೌ
ಟು ಸಂಘಕ್ಕೆ ಸಂಯೋಜಿಸಬೇಕೆಂದು ಮ
ದರಾಸಿನ ಸೇವಾಸಮಿತಿ ಸಂಘದ ಪ್ರಾಂ
ತೀಕ ಸಂಚಾಲಕರು ಬರೆದ ಪತ್ರ ಓದ
ಲಾಯಿತು. ಇಡೀ ಹಿಂದುಸ್ಥಾನಕ್ಕೆ ಒಂ
ದು ಕೇಂದ್ರ ರಾಷ್ಟ್ರೀಯ ಬಾಲಚಮೂ
ಸಂಸ್ಥೆಯು ಏರ್ಪಾಡಾಗುವ ವರೆಗೆ ಈ ವಿ
ಷಯವನ್ನು ಮುಂದರಿಸಿಡುವಂತೆ ತೀ
ರ್ಮಾನಿಸಲಾಯಿತು.

20. ಡಿ. ಬೋರ್ಡಿನ ಉಪನಿಬಂಧ
ನೆಗಳನ್ನು ತಿದ್ದುಪಡಿ ಮಾಡುವ ಕಮಿಟಿ
ಯ ಕೆಲಸವನ್ನು ಮುಂದರಿಸಬೇಕೆಂಬ ಕ
ಮಿಷನರ ಪತ್ರ ಓದಲಾಯಿತು. ಕಳೆದ
ತಿಂಗಳ ಕೌನ್ಸಿಲು ವಿಾಟಿಂಗಿನಲ್ಲಿ ಪಾಸಾ
ದಂತೆ ಕೊಡಗು ಡಿಸ್ಟ್ರಿಕ್ಟ್ ಫಂಡ್ ರೆಗ್ಯುಲೇ
ಷನನ್ನು ಸರಕಾರದವರು ಬೇಗನೆ ತಿದ್ದುಪ
ಡಿ ಮಾಡುವರೋ ಎಂಬ ವಿಚಾರ ಕಮಿಷ
ನರಿಗೆ ಬರೆದು ತಿಳಿಯುವಂತೆ ತೀರ್ಮಾನ
ವಾಯಿತು.

21. ಬೋರ್ಡಿನ 37-38 ರ ಆಡಳಿ
ತದ ಕರಡು ವರದಿಯನ್ನು ಓದಿ ಒಪ್ಪಲಾ
ಯಿತು. ಇದರ 100 ಕನ್ನಡ ಮತ್ತು
100 ಇಂಗ್ಲಿಷ್ ಪ್ರತಿಗಳನ್ನು ಅಚ್ಚು ಹಾ
ಕಿಸುವಂತೆ ತೀರ್ಮಾನವಾಯಿತು.

22. ಸಿದ್ದಾಪುರ ಆಸ್ಪತ್ರೆಯನ್ನು ಆ
ಲ್ಲಿಯ ಮುನ್ಸಾಫರಿ ಬಂಗ್ಲೆಗೆ ವರ್ಗಾಯಿ
ಸುವ ವಿಷಯ ಇನ್ನೊಂದು ವಿಾಟಿಂಗ್ಗಿಗಿಡ
ಲಾಯಿತು.

ಈ ಸಮಯದಲ್ಲಿ ಬೋರ್ಡಿನ ಪ್ರೆಸಿ
ಡೆಂಟರು ಎಕ್ಸೈಸ್ ಎಡ್ವೈಸರಿ ಕಮಿಟಿಯ
ವಿಾಟಿಂಗಿಗೆ ಹೋಗಬೇಕ್ಕಾಗಿ ಬಂದ ಕಾರ
ಣ ವೈಸ್ ಪ್ರೆಸಿಡೆಂಟರಾದ ಮೆ. ರಾಮಶೆ
ಟ್ಟಿಯವರು ಅಧ್ಯಕ್ಷಸ್ಥಾನವನ್ನು ವಹಿಸಿ
ಕೊಂಡರು. ಅಸಿಸ್ಟೆಂಟ್ ಕಮಿಷನರು, ಮೆ.
ಎಚ್. ಯಂ. ಪುಷ್ಪಣ್ಣನವರು, ಮತ್ತು
ಮೆ. ಬ್ರಮೂಲ್ಡರವರು ಎಕ್ಸೈಸ್ ಎಡ್ವೈಸರಿ
ವಿಾಟಿಂಗಿಗೆ ಹೋದರು.

23. ಡಿಸ್ಟ್ರಿಕ್ಟ್ ಫಂಡ್ ಮ್ಯಾನುವಲಿನ
80 (a) ನಿಬಂಧನೆಗೆ ಹೆಚ್ಚಾಗಿ ಸೇರಿಸಲು
ಸಿವಿಲ್ ಸರ್ಜನರು ಕಳುಹಿಸಿದ ಹೊಸ ನಿ
ಬಂಧನೆಗಳನ್ನು ಠರಾವು ನಂ- 7ರ ಕ
ಮಿಟಿಗೆ ಪರ್ಯಾಲೋಚನೆಗೆ ಬಿಡಲಾ
ಯಿತು.

24. ಮೂರ್ನಾಡು ಶಾಲೆಗೆ ಒಬ್ಬ
ಹೆಚ್ಚಿಗೆ ಉಪಾಧ್ಯಾಯರನ್ನು ಕೊಡಬೇ
ಕೆಂಬ ಡಿ. ಇನ್ಸ್‌ಪೆಕ್ಟರವರ ಸೂಚನೆಯು
ಮಂಜೂರಾಗಲಿಲ್ಲ.

[ಸಶೇಷ.]

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ.

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಅಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೯೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯು ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.,
ಅಫಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-7

ಕೌನ್ಸಿಲ್ ವಿಾಟಿಂಗು.

(5ನೇ ಪುಟದಿಂದ ಬಂದದ್ದು)

ಫೈನಾನ್ಸು ಮೆಂಬರರು ಹಣವ ಆ ಭಾವದಿಂವ ಇದು ಸಾಧ್ಯವಿಲ್ಲವೆಂದೂ, ಇದಕ್ಕಾಗಿ ರೂ. 2000 ಖರ್ಚಾಗಬೇಕೆಂದೂ, ಈ ಖರ್ಚಿನಷ್ಟು ಅದರಲ್ಲಿ ಉತ್ಪತ್ತಿ ಇಲ್ಲವೆಂದೂ, ಆದ್ದರಿಂದ ಇದು ಪ್ರಯೋಜನಕಾರಿಯಲ್ಲವೆಂದೂ ಹೇಳಿ ಠರಾವನ್ನು ವಿರೋಧಿಸಿದರು.

ಶ್ರೀ ಯಂ. ಯಂ. ಬೆಳ್ಯಪ್ಪನವರು ಈ ರಸ್ತೆಯಿಂದ ಫಾರೆಸ್ಟು ಇಲಾಖೆಗೆ ತುಂಬಾ ಲಾಭವಿದೆಯೆಂದೂ, ರೂ. 2000 ಏನೂ ದೊಡ್ಡ ಖರ್ಚಲ್ಲವೆಂದೂ ಹೇಳಿದರು.

ಫೈನಾನ್ಸು ಮೆಂಬರು ಈ ವಿಚಾರ ಹಣ ಸಿಕ್ಕಿದಾಗ ಆಲೋಚಿಸಲಾಗುವದೆಂದರು.

ಓಟಿಗೆ ಹಾಕಲಾಗಿ ಎಲ್ಲಾ ಚುನಾಯಿತ ದೇಶೀಯ ಮೆಂಬರುಗಳು ಪರವಾಗಿ ಓಟು ಮಾಡಿದ್ದರಿಂದ ಠರಾವು ಮಂಜೂರಾಯಿತು.

19. 'ಬೇತರಿಯಲ್ಲಿ ಕಾವೇರಿ ಹೊಳೆಗೆ ಖಾಯಂ ಆದ ಒಂದು ಸೇತುವೆಯನ್ನು ಕಟ್ಟಲು ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಶ್ರೀ ಯಂ. ಯಂ. ಬೆಳ್ಯಪ್ಪನವರು ವಾಪಸು ತೆಗೆದುಕೊಂಡರು.

[ಸಶೇಷ.]

ಬಾತ್ಮಿ.

—೦೦—

'ಸಂಸ್ಕೃತವು ಮೃತ ಭಾಷೆ!' ಆದರೂ ನಮಗೆ ಅಗತ್ಯವಾದ ಭಾಷೆ.

ನಮ್ಮ ಕೊಡಗು ಕೌನ್ಸಿಲಿನ ಕಳೆದ ವಾರ ಮುಗಿದ ಅಧಿವೇಶನದಲ್ಲಿ ನಡೆದ ಕೆಲವು ಪ್ರಶ್ನೋತ್ತರಗಳಲ್ಲಿ ಸಂಸ್ಕೃತ ಖೋತೆಯ ವಿಷಯವು ಬಂದಿತ್ತು. ಸಂಸ್ಕೃತ ಉಪಾಧ್ಯಾಯರ ಸ್ಥಾನವನ್ನು ಖೋತೆ ಮಾಡುವುದುಂಟೇ? ಇರುವುದಾದರೆ ಯಾಕೆ? ವಿದ್ಯಾರ್ಥಿಗಳ ಸಂಖ್ಯೆಯ ಮೇಲಿಂದ ಖೋತೆ ಮಾಡುವುದಾದರೆ ಉರ್ದು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಸಂಸ್ಕೃತ ವಿದ್ಯಾರ್ಥಿಗಳ ಸಂಖ್ಯೆ ಉರ್ದು ವಿದ್ಯಾರ್ಥಿಗಳಿಗಿಂತ ಕಡಿಮೆ ಇಲ್ಲವಾದರೆ ಸಂಸ್ಕೃತವನ್ನು ಮಾತ್ರ ಯಾಕೆ ಖೋತೆ ಮಾಡಲಾಗುತ್ತೆ? ಇವೇ ಮೊದಲಾದ ಪ್ರಶ್ನೆಗಳನ್ನು ಶ್ರೀ. ಗಳಾದ ಐ. ಪಿ. ಕಾರ್ಯಪ್ಪನವರೂ, ಪಿ. ಐ. ಬೆಳ್ಯಪ್ಪನವರೂ ಕೇಳುವಾಗ್ಯೆ ಕೊಡಗು ಶಾಲಾ ಇನ್ಸ್‌ಪೆಕ್ಟರಾದ ಮಿ. ಥಾಮಸನ್ ಸಾಹೇಬರು ಇನ್ನೂ ಯಾವುದೂ ನಿಶ್ಚಯವಿಲ್ಲವೆಂತಲೂ, ಎಲ್ಲವನ್ನೂ ಇನ್ನು ಒಂದು ತಿಂಗಳ ಅವಧಿಯಲ್ಲಿ ವಿಮರ್ಶಿಸಿ ಹೇಳಲಾಗುವುದೆಂತಲೂ ಹೇಳಿದರು. ಮರು ಪ್ರಶ್ನೆಗಳನ್ನು ಮೇಲೆ ಹೇಳಿದ ಉತ್ತರಗಳ ಮೇಲೆ ಕೇಳಲು, (Supplementary questions) ಥಾಮ್‌ಸನರು ತಾವು ಸಂಸ್ಕೃತ ಅಭ್ಯಾಸ ಮಾಡಿರುವೆನೆಂತಲೂ, ತನಗೆ ತಕ್ಕಷ್ಟು ಜ್ಞಾನವಿದೆಯೆಂತಲೂ, ಸಂಸ್ಕೃತವು ಮೃತ ಭಾಷೆಯೆಂತಲೂ, ಕೆಂಬ್ರಿಜ ಮತ್ತು ಬೆಂಗಳೂರು ಕಂಟೋನ್ಮೆಂಟುಗಳಲ್ಲಿ ಸಂಸ್ಕೃತಕ್ಕೆ ಪ್ರಾಶಸ್ತಿ ಇಲ್ಲವೆಂತಲೂ ಹೇಳಿದರು. ಮೂತ್ರಸಲ್ಲ, ಲೇಟಿನ್ ಮತ್ತು ಗ್ರೀಕ್‌ಗಳಿಗೆ ಪ್ರಾಶಸ್ತಿಯು ಹೆಚ್ಚಿಗೆ ಇದೆಯೆಂತಲೂ ಹೇಳಿದರು. ಈ ಮಾತುಗಳನ್ನಷ್ಟರಲ್ಲೇ ಮುಗಿಸದೆ ಉರ್ದುವು ಲೋಕಪ್ರಿಯವಾದ ಭಾಷೆಯಾದ್ದರಿಂದ ಅದಕ್ಕೆ ಉತ್ತೇಜನವನ್ನು ಆದಷ್ಟೂ ಕೊಡಬೇಕೆಂದು ಹೇಳಿ ತಮ್ಮ ಸಂಸ್ಕೃತ ಭಾಷಾ ಪರಿಚಯದಿಂದ ಆ ಭಾಷೆಯ ಮೇಲೆ ಅನಾಧಾರದ ಉದ್ಗಾರಗಳನ್ನು ಹೊರಚೆಲ್ಲಿರುವರು. ಇವರು ತಮ್ಮ ಮಾತುಗಳಿಂದ ಇನ್ನೂ ನಿಶ್ಚಿತವಿಲ್ಲವೆಂದರೂ ಸಂಸ್ಕೃತದ ಖೋತೆಯು ವೀರಾಜಪೇಟೆಯಲ್ಲಿ ನಿಶ್ಚಯವೆಂದು ಸ್ಪಷ್ಟವಾಗಿರುತ್ತದೆ. ಜನರ ಅಭಿಪ್ರಾಯದ ಮೇಲಿಂದ ತಾವು ವೀರಾಜಪೇಟೆಯಲ್ಲಿ ಸಂಸ್ಕೃತವನ್ನು ಸ್ಥಾಪಿಸಲಿಲ್ಲವೆಂದು ಹೇಳಿರುವ ಥಾಮ್‌ಸನರವರ ನಿಜತ್ವದ ಅಜ್ಞಾನವನ್ನು ಕೊಂಚಮಟ್ಟಿಗೆ ನೋಡಬೇಕಾಗಿದೆ. 1925ರಲ್ಲಿಯ ಕೌನ್ಸಿಲ್ ಪ್ರೊಸಿಡಿಂಗ್ಸ್ ತೆಗೆದು ನೋಡಿದರೆ ಚೆನ್ನಾಗಿ ಗೊತ್ತಾಗುತ್ತದೆ. ರಾ. ಬಾ. ಶ್ರೀ ಪತಿರಾಯರು ಕೊಡಗಿನ ಶಾಲೆಗಳಲ್ಲಿ ಸಂಸ್ಕೃತವನ್ನು ಇಡಬೇಕೆಂದು ತಂದದ್ದ ಠರಾವನ್ನು ಇನ್ಸ್‌ಪೆಕ್ಟರ್ ಅಂಗೀಕರಿಸಿದ ವಿಷಯವೂ, ನಂತರ ಜನರ ಅಭಿಪ್ರಾಯದಂತೆ ವೀರಾಜಪೇಟೆಯ ಮತ್ತು ಮಡಿಕೇರಿಯ ಹೈಸ್ಕೂಲುಗಳಲ್ಲಿ ಸಂಸ್ಕೃತವು ಖಾಯಂ ಸ್ಥಾಪಿತವಾದದ್ದೂ, ದೇಶದ ಪ್ರತಿನಿಧಿಗಳ ಮತ್ತು ವೀರಾಜಪೇಟೆಯ ಜನರ ಶ್ರಮದಿಂದಲೇ (Mass application) ಎಂದು ಥಾಮಸನ್‌ರವರಿಗೆ ಗೊತ್ತಿಲ್ಲದೆ ಇರುವುದು ಅಥವಾ ತಿಳಿಯಲು ಶ್ರಮ ಪಡದೆ ಇರುವುದು ಶೋಚನೀಯ. ಈ ಸಂಗತಿಗಳು ಇನ್ಸ್‌ಪೆಕ್ಟರರಿಗೆ ಗೊತ್ತಿದ್ದರೆ 'ಈ ವಿಷಯ ಸರ್ಕಾರಕ್ಕೆ ಗೊತ್ತಿಲ್ಲ' ಎಂದು ಹೇಳಿ ಮೂಗು ಮುರಿದು ಮೈತಪ್ಪಿಸುವ ವಿಚಾರವನ್ನೆತ್ತುತ್ತಿರಲಿಲ್ಲ. ಈಗಲಾದರೂ ಮೇಲಿಂದ ಮೇಲೆ ಕೇಳಿವ ಪ್ರಶ್ನೆಗಳಿಂದ ಸರ್ಕಾರದವರೂ, ಇನ್ಸ್‌ಪೆಕ್ಟರ್ ಸಾಹೇಬರವರೂ ವೀರಾಜಪೇಟೆಯ ಶಾಲೆಯಲ್ಲಿ ಸಾರ್ವಜನಿಕ ಶ್ರಮದಿಂದ ಸಂಸ್ಕೃತವು ಸ್ಥಾಪಿಸಲ್ಪಟ್ಟದ್ದೂ, ಜನರ ಅಭಿಪ್ರಾಯಕ್ಕೆ ವಿರುದ್ಧ ವರ್ತನೆಯನ್ನು ಎಂದೂ ಮಾಡುವುದು ಒಳ್ಳೆಯದಲ್ಲವೆಂದು ತಿಳಿಯದೆ ಇರಲಿಕ್ಕಿಲ್ಲ.

ಇನ್ನೊಂದು ನಮ್ಮ ಇನ್ಸ್‌ಪೆಕ್ಟರವರ ಮಾತೆಂದರೆ ಅವರ ಜಂಭ. ತಾವು ಸಂಸ್ಕೃತವನ್ನು ತಕ್ಕಷ್ಟು ಅಭ್ಯಾಸ ಮಾಡಿದ್ದೇನೆ, (Special study) ಅದು ಮೃತ ಭಾಷೆ, ಉರ್ದುವಿಗೆ ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕು ಎಂದು ಹೇಳಿರುವರು. ಆದರೆ ಈ ಮಹಾಶಯರು ಯಾವ ಶಾಲೆಯಲ್ಲಿ ಸಂಸ್ಕೃತ ಅಭ್ಯಾಸ ಮಾಡಿ ಯಾವ ಪ್ರಶಸ್ತಿಪತ್ರ (Degree or diploma)

ಹಡೆದಿರುವಂತಿಬದು ನಮ್ಮಲ್ಲಿ ಹೆಚ್ಚಿನ ಜನರಿಗೆ ಗೊತ್ತಿಲ್ಲವಾದ್ದರಿಂದ ಅವರು ಸಂಸ್ಕೃತವು ಮೃತ ಭಾಷೆಯೆಂದು ತೀಕೆಸಿದ್ದು. ಒಂದೇ ಮಾತಿನಿಂದ ಹೇಳುವುದಾದರೆ, ಆ ಹರ ತೀಕೆಯು ಬಹಳ ಹಳೆಬರ ತೀಕೆಯ ನ್ನೇ ಅನುಸರಿಸುತ್ತದೆ. ಈಗಿನ ಜನಜಾಗ್ರತಿ, ಪುರಾತನ ಸಂಸ್ಕೃತಿಗಳ ಅಭಿಮಾನ, ಕಾಂಗ್ರೆಸ್ ಪ್ರಭುತ್ವದ ಭವಿಷ್ಯತ್ತು ಮತ್ತು ಗುರಿ, ಇವುಗಳ ಮಧ್ಯೆ ನಮ್ಮ ಥಾಮಸನ್‌ರವರು ನುಡಿದ ಮಾತು ಮೃತವೆಂದೇ ಎಣಿಸಬೇಕು. ಇಂಥಾ ವರಿಷ್ಟ ವರ್ಗದ ಅಧಿಕಾರಿಗಳು ಕೆಂಬ್ರಿಜ, ಬೆಂಗಳೂರು ಕಂಟೋನ್ಮೆಂಟ್ ಹೊರತು ಬೇರೆ ವಿದ್ಯಾ ನಿಲಯಗಳ ಮಾತೇ ಎತ್ತದೆ ಇದ್ದದ್ದು ಅವರ ಪಾಂಡಿತ್ಯಕ್ಕೆ ಕಲಂಕ ತರಲೂ ಬಹುದು. ಜರ್ಮನಿಯ ಸಂಸ್ಕೃತ ಪಾಂಡಿತ್ಯವೇ ತನ್ನ ಈಗಿನ 'ಆರ್ಯ' ಮತ್ತು 'ಸ್ವಾಸ್ತಿಕ' ಶಬ್ಧಗಳ ಗುಟ್ಟಿಂದು ಯಾರು ತಾನೇ ತಿಳಿಯರು. 'ಕೆಂಬ್ರಿಜ'ನಲ್ಲಿ ಸಂಸ್ಕೃತವಿಲ್ಲದಿದ್ದರೆ 'ಆಕ್ಸಫೋರ್ಡಿ'ನಲ್ಲಿದೆ. ಬೆಂಗಳೂರಿನ ಕಂಟೋನ್ಮೆಂಟಿಗೂ ನಮ್ಮ ಶಾಲೆಗಳಿಗೂ ಯಾವ ಬಾಂಧವ್ಯ? ಹೇಗಾದರೂ ನೂಡಿ ಅಳುವ ಮಕ್ಕಳನ್ನು ಸಮಧಾನಿಸಲು, ಪ್ರಯತ್ನ.

ದಕ್ಷಿಣ ಕೊಡಗಿನ ವಿದ್ಯಾರ್ಥಿಗಳು ಸಂಸ್ಕೃತ ಕಲಿಯಲು ಇಚ್ಛಿಸಿದರೆ ತಾನು 'ಸ್ಕಾಲರ್‌ಶಿಪ್' ಕೊಡಿಸುತ್ತೇನೆಂದು ನುಡಿದ ಮಾತು ಕೇವಲ ತಮ್ಮ ಕೆಲಸಕ್ಕೋಸ್ಕರವೇ. ಇವರು ಎಷ್ಟು ಸ್ಕಾಲರ್‌ಶಿಪ್ ಕೊಟ್ಟಾರು? ಇದಕ್ಕಿಂತಲೂ ಒಬ್ಬ ಉಪಾಧ್ಯಾಯನನ್ನೇ ನೇಮಿಸಿದರೆ ಇವರಿಗೆ ಹೆಚ್ಚೆಂದರೆ ಎಷ್ಟು ಖರ್ಚಾದೀತು. ನಮ್ಮ ಸಂಸ್ಕೃತಿಯು ಇದೇ ಭಾಷೆಯಲ್ಲಿ ಅಡಕವಾಗಿರುವಾಗ ನಮಗೆ ಉರ್ದು ಪ್ರೇಮಿಗಳಾಗಿರೆಂದು ಹೇಳುವುದು ಕೇವಲ ರಾಜಕಾರ್ಯದ ಭೇದೋಪಾಯ. ಈಗ ಹದಿಮೂರು ವರ್ಷಗಳಿಂದ ಕಲಿಸುತ್ತಿರುವ ಭಾಷೆಯು ಇಂದು ಮೃತ ಭಾಷೆ, ಆದು ಹಾಗೆ, ಇದು ಹೀಗೆ ಎಂದು ಕುಂಟು ನೆಪ ಹೇಳಿ ಮೈಮುರಿಯುವ ಮಾತಿಗೆ ನಮ್ಮ ಕೊಡಗಿನ ಜನರು ಬೆರಗಾಗಲಿಕ್ಕಿಲ್ಲವೆಂದೂ, ಒಂದು ಸಲ ಖಾಯಂ ಸ್ಥಾಪಿತವಾದ ಸಂಸ್ಕೃತ ಭಾಷೆಯು ಆದು ಮೃತ ಭಾಷೆಯಾಗಲೀ, ಆಗದೆ ಇರಲಿ, ಹೇಗೂ ವಿರಾಜಪೇಟೆ ಹೈಸ್ಕೂಲಿನಿಂದ ತೆಗೆದುಬಿಡಬಾರದೆಂದೂ, ಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ ಸರ್ಕಾರವೂ ಮತ್ತು ಥಾಮ್‌ಸನ್ ಸಾಹೇಬರೂ ಹೋದಲ್ಲಿ ನಮ್ಮ ಕೊಡಗಿನವರು 1925-26ರಲ್ಲಿ ನಡೆಸಿದಂತೆ ಉಗ್ರ ಚಳವಳಿ ನಡೆಸಿಯಾದರೂ, ಸಂಸ್ಕೃತವು ಶಾಶ್ವತವಾಗಿ ಕೊಡಗಿನ ಎರಡೂ ಹೈಸ್ಕೂಲುಗಳಲ್ಲಿ ಇರುವಂತೆ ನೂಡಬೆ ಇರಲಾರದೆಂದೂ ಸರ್ಕಾರವು ತಿಳಿಯಲೇ ಬೇಕು.

'ಕೌನ್ಸಿಲ್' ಮೀಟಿಂಗಿನಲ್ಲಿ
ಹಾಜರಿದ್ದವ.'

FOR SALE.

One big storeyed tiled house with a number of tiled out houses and with extensive compound and 1½ acres of Coffee Estate, banana gardens situated in Brahmin Valley and known as extre-asurer A. P. Subbaya's house. Rs. 6000/- or nearest offer acceptable.

A. P. Seetharamiah,
Brahmin Valley,
4-2 Mercara.

ಕೊಡಗು ಮುಜ್ರಾಯಿ ಇಲಾಖಾ ಪ್ರೆಸಿಡೆಂಟರ ಆಫೀಸಿನಿಂದ

ಇಸ್ತಿಹಾರು ನಾಮೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ:-

ಸನ್ 1892 ನೇ ಇಸವಿ 4 ನೇ ನಂಬರು ರೆಗ್ಯೂಲೇಶನ್ ಅನುಸರಿಸಿ ಹಜರತ್ ಚೀಫ್ ಕಮಿಷನರ್ ಸಾಹೇಬರು ಘುಂಜೂರು ಮಾಡಿದ 1892 ನೇ ಇಸವಿ ಡಿಸೆಂಬರ್ ತಾರೀಕು 19 ನೇ ನಂಬರು 67 ನೇ ನೋಟಿಫಿಕೇಶನಿನಲ್ಲು ನಮೂದಿಸಿರುವ ರೂಲ್‌ಮೇರೆ ಈ ಕೆಳಗೆ ನಮೂದಿಸಿರುವ ಮೆಂಬರುಗಳ ಕೆಲಸವು ಕಾಲಿ ಬಿದ್ದಿರುವ ಮತ್ತು ಕಾಲಿ ಬೀಳುವ ಮೆಂಬರುಗಳ ಬದಲಿಗೆ ಬೇರೆ ಮೆಂಬರುಗಳನ್ನು ಚುನಾಯಿಸಲ್ಪಡುತ್ತೆ

ನಂ.	ಯಾರ ಬದಲಿಗೆ	ಮೆಂಬರುಗಳ ಅವಧಿ ಪೂರೈಸಿದ ಯಾ ಪೂರೈಸುವ ತಾರೀಕು.	ಮೆಂಬರುಗಳನ್ನು ಚುನಾಯಿಸುವುದಕ್ಕೆ ಸಭೆಯು ಸೇರುವ ಸ್ಥಳ.	ತಾರೀಕು	ಘಂಟೆ.
1.	ಮೆ. ಪಿ. ಜಿ. ಮುದ್ದಮ್ಮಯ್ಯನವರು.	7—11—'36.	ವೀರಾಜಪೇಟೆ ಮೆ ಅಸಿ ಕೆ ನಂಜಪ್ಪನವರ ಛತ್ರ.	4—1—39	ಹ. 12ರಿಂದ 5ರ ವರೆಗೆ
2.	ಮೆ. ಕೆ. ಕಾಳಪ್ಪನವರು	15 1. 1939	do.	do	do.
3	ಮೆ. ಆರ್. ಯಂ. ಕಪಸ್ಪೈಯ್ಯನವರು.	do	ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲ್	6—1—39	do.
4.	ಮೆ. ಬಿ. ಐ. ಕರುಂಬಯ್ಯನವರು.	do	do	do	do

ಪ್ರಸಿದ್ಧಪತ್ರಿಕೆ.

ಕೊಡಗು ದೇವಸ್ಥಾನಗಳ ಆಡಳಿತ ಬಗ್ಗೆ ಚೀಫ್ ಕಮಿಷನರ್ ಸಾಹೇಬರವರ ರೆಗ್ಯೂಲೇಶನ್ ಮೇರೆ ಎಡೆನಾಲ್ಕುನಾಡು, ಕಿಗ್ಗಟ್ಟುನಾಡು ತಾಲೋಕುಗಳಿಗೆ ನೇಮಕವಾದ ಮೆಂಬರು ಮೆ. ಪಿ. ಜಿ. ಮುದ್ದಮ್ಮಯ್ಯನವರು ಇವರ ಮೆಂಬರುತನವು ಕಾಲಿ ಬಿದ್ದಿರುವದರಿಂದ ಮತ್ತು ಮೆ. ಕೆ. ಕಾಳಪ್ಪನವರು ಇವರ ಮೆಂಬರುತನವು ಕಾಲಿಬೀಳುವುದರಿಂದಲೂ ಮತ್ತು ಮಡಿಕೇರಿ ನಂಜರಾಯಪಟ್ಣ ತಾಲೋಕುಗಳಿಗೆ ನೇಮಕವಾದ ಮೆಂಬರು ಮೆ. ಆರ್. ಯಂ. ಕಪಸ್ಪೈಯ್ಯನವರು ಮತ್ತು ಮೆ. ಬಿ. ಐ. ಕರುಂಬಯ್ಯನವರು ಇವರ ಮೆಂಬರುತನವು ಕಾಲಿ ಬೀಳುವದರಿಂದ ಮೇಲೆ ನಮೂದುಳ್ಳ ಸ್ಥಳದಲ್ಲು ಮೇಲ್ಕಂಡ ನಮೂದಿಸಿರುವ ತಾರೀಕು ಮತ್ತು ಘಂಟೆಗೆ ಸರಿಯೊಗಿ ಆರ್ಜಿದಾರರ ಪರವಾಗಿ ಓಟ್ಸ್ ರಿಕಾರ್ಡು ಮಾಡಿಕೊಳ್ಳತಕ್ಕ ಬಗ್ಗೆ ಟಿಲ್ಲರುಗಳು ಟೆಂಪಲ್ ಕಮಿಟಿ ಮೆಂಬರು ಮೆ. ಕೆ. ಕೆ. ಬೆಳ್ಯಪ್ಪನವರು ಮತ್ತು ಟೆಂಪಲ್ ಮೆನೇಜರು ವೀರಾಜಪೇಟೆಯಲ್ಲಿಯೂ ಮತ್ತು ಮೆ. ಕೆ. ನರಸಿಂಹಮೂರ್ತಿಯವರು ಮತ್ತು ಟೆಂಪಲ್ ಮೇನೇಜರು ಮಡಿಕೇರಿಯಲ್ಲಿಯೂ ಓಟ್ಸ್ ರಿಕಾರ್ಡ್ ಮಾಡುತ್ತಾರೆ. ಮೆಂಬರಾಗಲು ಖಾಯಿಸ್ ಇರತಕ್ಕವರು ಓಟ್ಸ್ ತೆಗೆಯಲು ಮೊಖರೂರು ಮಾಡಿರುವ ತಾರೀಕಿಗೆ ಮೂರು ದಿನಗಳ ಮುಂದಾಗಿ ಅವರವರ ಆರ್ಜಿಯನ್ನು ಈ ಕೆಳಗೆ ದಸ್ಕತ್ತು ಮಾಡಿರತಕ್ಕವರಿಗೆ ತಲಪುವಂತೆ ಕಳುಹಿಸತಕ್ಕದ್ದು. ವಾಯಿದೆಯ ನಂತರ ಬರತಕ್ಕ ಆರ್ಜಿಗಳನ್ನು ಅಂಗೀಕರಿಸುವದಿಲ್ಲವಾದ ವಿವರ ಸೂಚಿಸಿದೆ.

ಮಡಿಕೇರಿ,
ತಾ. 31-10-1938.

ಕೆ. ಕಾಳಪ್ಪ,
(ಪ್ರೆಸಿಡೆಂಟ್.)

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಆದರಲ್ಲಿ ಹಿಂದಿನ ವರ್ಷದ ಪೂರ್ತಿಯೊಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮೂ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಟ್ಟೆ ಸ್ಥಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳ್ಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳಿಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮೂ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮೂ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮೂ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ನವರದಿ ವರ್ಷದ ವಿಮೂ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವ ವಿಮೂ ಫಂಡು:—ಈ ಕಂಪೆನಿಯ ಜೀವ ವಿಮೂ ಫಂಡು ರೂ 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮೂ ಕಂತು	ಜೀವ ವಿಮೂ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ ಈ ಅಭಿವೃದ್ಧಿಯು ಭಾರತ ವಿಮೂ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲ್ಪಡವಾದದ್ದೇ ಆಗಿದೆ.

ಭಾರತ ಜೀವವಿಮೂ ಕಂಪೆನಿಗಳ ಆಕ್ಟಿನ ಮೇರೆ ತೇವಣಾತಿ:—ಈ ಖಾನೂನು ಮೇರೆ ತೇವಣಾತಿ ಮಾಡತಕ್ಕದ್ದಿದ್ದ ರೂ, 2 ಲಕ್ಷವನ್ನು ಪೂರ್ತಿಯೊಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳಿಗೆ ಸಂತೋಷವುಳ್ಳವರಾಗಿರುವರು.

ಸಿ. ಯಂ. ತಿಮ್ಮಯ್ಯ,
(52-21) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಃ ದೇವದತ್ತ. ಃ

ಸಾಮಾಜಿಕ ಕಾದಂಬರಿ.

೧೧ನೇ ಅಧ್ಯಾಯ.

ಕಮಲೆಯ ಆಗಮನವು ದೇವದತ್ತನ ಹೃದಯವನ್ನು ಎಷ್ಟು ವಿಕಸಿತಗೊಳಿಸಿತೋ ಈಗ ಅವಳ ವಿರಹವು ಅವನನ್ನು ಅಷ್ಟೇ ಖಿನ್ನವಾಗಿ ಮಾಡಿತು. ಅವನ ದುಃಖವು ಬಹು ದಿನಗಳ ವರೆಗೆ ಅವನಿಗೆ ಸರಿಯಾದ ಸಮೂಧಾನವನ್ನೇ ಕೊಡಲಿಲ್ಲ. ಅನೇಕ ಅನರ್ಥ ಯೋಚನೆಗಳೂ ಸಹ ಒಮ್ಮೆಯೊಮ್ಮೆ ತಲೆದೋರುತ್ತಿದ್ದವು. ವ್ಯಾಧಿಪೀಡಿತನ ಹಾಗೆ ಅವನ ಶರೀರವು ಸಹ ಕ್ಷೀಣಗತಿಯನ್ನು ಹೊಂದತೊಡಗಿತು. ಶರೀರ ಕ್ಷೀಣಿಸಿದ ಹಾಗೆಯೇ ತನ್ನ ಜ್ಞಾನಶಕ್ತಿಯೂ ಕಳೆಗುಂದುವಂತೆ ಕಾಣಬರತೊಡಗಿತು. ಆಟ ಪಾಠಗಳಲ್ಲಿ ಸರಿಯಾದ ಅಭಿರುಚಿಯೇ ಇರಲಿಲ್ಲ.

ಎಲ್ಲರೂ ತಂದೆಯ ಮೇಲಿನ ವ್ಯಸನದಿಂದ ಈ ಮೂರ್ಖಾಡುಗಳುಂಟಾಗಿರಬಹುದೆಂದು ಯೋಚಿಸಿ ಅವನಿಗೆ ಬಹು ವಿಧದಿಂದ ಸಮೂಧಾನಮಾಡುತ್ತಿದ್ದರು. ಕಾಯಿಲೆಯೊಂದು, ಚಿಕಿತ್ಸೆಯೊಂದಾದರೆ ರೋಗಿಗೆ ಸುಖವಾದೀತೇ? ಕಮಲೆಯ ವಿರಹ ದುಃಖದಿಂದುಂಟಾದ ಮನೋತಾಪವನ್ನು ಶಮನಗೊಳಿಸಲು, ಕಡೆಗೆ ಸರ್ವರ ಮಿತ್ರನಾದ 'ಕಾಲವೇ' ನೆರವಾಯಿತು.

'ಕಾಲವು' ಪಕ್ಷಪಾತವಿಲ್ಲದೆ ಎಲ್ಲರಿಗೂ ಏಕರೀತಿಯಲ್ಲಿ ಸಹಾಯ ಮಾಡತಕ್ಕ ಸರ್ವಬಂಧುವಾಗಿರುತ್ತದೆ. ಎಂತಹ ದುಃಖವನ್ನಾದರೂ 'ಸಮಯವು' ಸಮಯನರಿತು ಶಮನಗೊಳಿಸಲಾಪದು. ಅದೇ ಕಾಲವು ದೇವದತ್ತನ ಸಹಾಯಕ್ಕೂ ಬಂದಿತು.

ಕಾಲವು ಕಳೆದ ಹಾಗೆ ದೇವದತ್ತನ ಮನಸ್ಸಿನಲ್ಲಿ ವ್ಯಸನವ ಬದಲು ನಾಚಿಕೆಯು ತಲೆದೋರಲಾರಂಭಿಸಿತು. ಅವನು ಮಾಡುತ್ತಿದ್ದದು, ಬರೇ ಹುಚ್ಚುತನದ ಕೆಲಸವೆಂಬದು ಕೊನೆಗೆ ಅವನಿಗೆ ತಿಳಿಯಿತು.

'ನಾನೇತಕ್ಕೆ ಇಷ್ಟೊಂದು ಚಿಂತೆಗೊಳಗಾಗಬೇಕು? ಕಮಲೆ ಯಾರು? ನಾನ್ಯಾರು? ಅವರ ಮೇಲೂ, ನನಗೂ ಅವಳಿಗೂ, ಇತರ ಹುಡುಗರಿಗೂ ನನಗೂ, ಅಥವಾ ಇತರ ಹುಡುಗರಿಗೂ ಅವಳಿಗೂ ಇದ್ದ ಸಂಬಂಧವೇ ಇರುವುದು. ಆ ಮಾತ್ರಕ್ಕೆ, ಅವಳಗಲಿ ಹೋದಳೆಂದರೆ ನಾನೇಕೆ ಅವರ ನಿಮಿತ್ತ ಇಷ್ಟರ ಮಟ್ಟಿಗೆ ಯೋಚಿಸುವುದು? ಅವಳಿಗೆ ನನ್ನಲ್ಲಿ ನಿಜವಾದ ಪ್ರೀತಿ ಇದ್ದಿದ್ದರೆ ಅವಳು ನನಗೆ ಒಂದು ಪತ್ರವನ್ನಾದರೂ ಬರೆಯುತ್ತಿರಲಿಲ್ಲವೆ? ಅಥವಾ ಹೋಗುವ ವಿಷಯವನ್ನಾದರೂ ತಿಳಿಸುತ್ತಿದ್ದಳು. ಇದೆಲ್ಲಾ ನನ್ನ ಭ್ರಾಂತಿ. ಅವಳಿಗೆ ಈಗ ಮನಸಿನಲ್ಲಿಯೂ ಸಹ ನನ್ನ ಯೋಚನೆ ಇರಲಾರದು. ಅದರ ಮೇಲೂ ಅವಳೇನೂ, ಸತ್ತು ಹೋಗಿಲ್ಲವಷ್ಟೇ. ನಾವಿಬ್ಬರೂ ಒಡಗೂಡಬೇಕೆಂಬುವುದು, ದೈನೇಚ್ಛೆಯಾದರೆ ಅದೆಂದಾದರೂ ಕೈಗೂಡಿಯೇ ತೀರಬೇಕು. ನನ್ನ ಮನಸ್ಸಿನ ತಾಪದ ಸರಿಯಾದ ಕಾರಣವು ಇತರರಿಗ್ಯಾರಿಗಾದರೂ ತಿಳಿವದ್ದಾದರೆ ಪರಿಣಾಮವೇನಾದೀತು? ಎಂತಹ ಅಪಹಾಸ್ಯಕ್ಕೆ ಒಳಗಾದೇನು? ಛಿ! ಅವಳ ಯೋಚನೆಯು ನನಗೇತಕಕ್ಕೆ? ಈ ಹಾಳು ಯೋಚನೆಯು ನನ್ನ ಬುದ್ಧಿಯನ್ನೂ ಶರೀರವನ್ನೂ ನಾಶಮಾಡುವಂತಿದೆ' ಎಂಬ ದಾಗಿ ಯೋಚಿಸುತ್ತಾ ಕಮಲೆಯ ಯೋಚನೆಯನ್ನು ಬಲತ್ಕಾರದಿಂದ ಮರೆಯಲು ಪ್ರಯತ್ನಿಸುತ್ತಿದ್ದನು.

ಆದರೂ ಅವಳನ್ನು ಒಮ್ಮೆಯೇ ಸಂಪೂರ್ಣವಾಗಿ ಮರೆತು ಬಿಡಲು ಆಗಲಿಲ್ಲ. ಅವಳಿಗೆ ಪತ್ರ ಬರೆಯುವುದೆಂದರೆ ಅವನಿಗೆ ಧೈರ್ಯಬಾರದು. ಅದೇನಾದರೂ ಬೈಲಿಗೆ ಬಿದ್ದರೆ ತಾನಿನ್ನು ಪ್ರಾಣವನ್ನಿಟ್ಟುಕೊಳ್ಳುವುದು ಹೇಗೆ ತನ್ನ ಸ್ನೇಹಿತರಿಗೆಲ್ಲಾ, ತನ್ನ ಗುಣ ನಡತೆಯ ವಿಷಯ ಅತ್ಯಂತ ಉತ್ಕೃಷ್ಟ ಅಭಿಪ್ರಾಯವಿರುವಾಗ್ಯೆ ಕಮಲೆಯ ಸರಿಯಾದ ಮನಸ್ಸನ್ನು ತಿಳಿಯದೆ, ಕಾಗದ ಬರೆಯಲು ಅವನಿಗೆ ಸರ್ವತ್ರ ಧೈರ್ಯಬರಲಿಲ್ಲ. ಆದರೂ ಸಮಯವು ಸರಿದ ಹಾಗೆ, ಕಮಲೆಯ ಯೋಚನೆಯು ಕ್ರಮ ಕ್ರಮವಾಗಿ ಕಡಿಮೆಯಾಗಲಾರಂಭಿಸಿತು. ಅನವರತವೂ ಅವಳ ಮೇಲೆಯೇ ಇದ್ದ ಅವನ ಯೋಚನೆಯು ಕಡೆ ಕಡೆಗೆ ದಿನಕ್ಕೊಮ್ಮೆ ವಾರಕೊಮ್ಮೆ, ತಿಂಗಳಿಗೊಮ್ಮೆಯಾಗಿ, ಒಂದೆರಡು ವರ್ಷಗಳಲ್ಲಿ ಸಂಪೂರ್ಣ ಅಳಸಿ ಹೋಯಿತು. ಒಮ್ಮೆ ಒಮ್ಮೆ ಯೋಚನೆಯಾದರೂ, ಅದು ಮೊದಲಿನಷ್ಟು ಮನಸ್ಸನ್ನು ಆವರಿಸುವಂತಹದ್ದಾಗಿರಲಿಲ್ಲ.

ಆಕೆಯನ್ನಗಲಿದ ಒಂದು ವರ್ಷದಲ್ಲಿ ದೇವದತ್ತನು ಮೆಟ್ರಿಕ್ಯೂಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ವಿಶ್ವವಿದ್ಯಾಭ್ಯಾಸಕ್ಕೆ ಬೊಂಬಾಯಿಗೆ ಹೋದನು.

ಅವನು ಕಲಿಯುತ್ತಿದ್ದ ಕಾಲೇಜಿಗೆ ಸರಿಯಾದ ಬೋರ್ಡಿಂಗ್ ಮನೆಯು ಇಲ್ಲದಿದ್ದ ಕಾರಣ ಒಬ್ಬ ಗೃಹಸ್ಥನ ಮನೆಯಲ್ಲಿದ್ದನು.

ಆ ಗೃಹಸ್ಥನಿಗೆ ಸುಮಾರು ಅರುವತ್ತು ವರ್ಷ ಪ್ರಾಯವಿರಬಹುದು. ಅವನಿಗೆ ಒಬ್ಬ ಮಗನೂ ಇಬ್ಬರು ಹೆಣ್ಣು ಮಕ್ಕಳೂ ಇದ್ದರು, ದೇವದತ್ತನೂ, ಗೃಹಸ್ಥನ ಮಗನೂ ಒಂದೇ ತರಗತಿಯಲ್ಲಿ ಓದುತ್ತಿದ್ದರು. ಇವರಿಬ್ಬರೊಳಗೆ ಹೇಳಲಸದಳವಾದ ಮೈತ್ರಿಯು ಬೆಳೆಯಿತು. ದೇವದತ್ತನನ್ನು ದೊಡ್ಡ ರಜೆಯಲ್ಲಿ 'ಡೇವಿಗೆ' ಅಗಲುವುದೆಂದರೆ ಬಹು ಕಷ್ಟವಾಗಿತ್ತು. ಗೃಹಣಿಗೂ ಗೃಹಸ್ಥನಿಗೂ, ದೇವದತ್ತನಲ್ಲಿ, ಡೇವಿಯ ಮೇಲೆ ಇದ್ದಷ್ಟೇ ಪ್ರೀತಿ ಇತ್ತು. ಡೇವಿಯ ಸಹೋದರಿಯರೂ ಸಹ ದೇವದತ್ತನ ಗುಣ ನಡತೆಗಳನ್ನು ಕುರಿತು ಅವನಲ್ಲಿ ಸಹೋದರಭಾವವನ್ನಿಟ್ಟು, ಬಹು ಸರಳವಾಗಿ ವರ್ತಿಸುತ್ತಿದ್ದರು.

ದೇವದತ್ತನು ಕಾಲೇಜಿಗೆ ಸೇರಿದ ಲಾಗಾಯಿತಿನಿಂದ ಅವನಿಗೆ ವ್ಯಸನಕ್ಕೆ ಯಾವುದೊಂದು ಅಸ್ಪದವೂ ದೊರೆಯಲಿಲ್ಲ. ಆದರೆ ಅವನು ಬಿ. ಎ. ಕ್ಲಾಸಿನ ಎರಡನೆ ತರಗತಿಯಲ್ಲಿ ಓದುತ್ತಿದ್ದಾಗ ಅಕಸ್ಮತ್ತಾಗಿ ಅವನ ಪ್ರಾಣಮಿತ್ರನಾದ ಡೇವಿಯು ಸತ್ತುಹೋದನು.

ದೇವದತ್ತನಿಗೆ ಮೊದಲು ಕಮಲೆಯನ್ನಗಲಿದ ದುಃಖಕ್ಕಿಂತಲೂ ಅಧಿಕವಾದ ದುಃಖವುಂಟಾಯಿತು. ತಾನಿದ್ದ ಮನೆಯನ್ನು ಬಿಟ್ಟು ಬಿಡಬೇಕೆಂದು ಪ್ರಯತ್ನಿಸಿದನು. ಆದರೆ ಮಗನ ವಿರಹಾಗ್ನಿಯಿಂದ ಬೇಯುತ್ತಿದ್ದ ಆ ವೃದ್ಧದಂಪತಿಯರ ಕೋರಿಕೆ ಮೇರೆ ಅವನು ಅಲ್ಲೇ ನಿಂತನು. ಆದರೆ ಅವನ ಮನಸ್ಸಿನ ಸಂತೋಷವು ಸಂಪೂರ್ಣ ಕಳಚಿ ಹೋಯಿತು. ಜೀವನದಲ್ಲಿ ಸಂಪೂರ್ಣ ಅಭಿರುಚಿಯು ತೊಲಗಿ ಹೋಯಿತು. ಲೋಕವೆಲ್ಲಾ ಒಂದು ಶೂನ್ಯಗೃಹದಂತೆ ಕಾಣಲಾಯಿತು. ವ್ಯಸನಸಾಗರದಲ್ಲಿ ತೇಲಾಡುತ್ತಿದ್ದ ವೃದ್ಧ ದಂಪತಿಯರಿಗೆ ದೇವದತ್ತನು ಅಭಯೂಪ್ಪದವಾದ ನಾವಿಕನಾದನು.

ಅದೇ ವರ್ಷ ಜೇವಿಯ ಸಹೋದರಿಯರ ಮದುವೆಯಾಯಿತು. ಅವರಿಬ್ಬರೂ, ವೃದ್ಧ ತಾಯಿ ತಂದೆಯರ ಮನೆಯಲ್ಲಿ ಇದ್ದರು. ದೇವದತ್ತನು ತನ್ನ ಬಿ. ಎ. ಪರೀಕ್ಷೆಯನ್ನು ಮುಗಿಸಿ ಮನೆಗೆ ಬಂದನು.

೧೨ ನೇ ಅಧ್ಯಾಯ.

ಅಪರಾನ್ಹ ನಾಲ್ಕು ಗಂಟೆ ಮೀರಿತ್ತು. ಸ್ಥಳವು ಸಮುದ್ರ ಪಟ್ಟಣಕ್ಕಿಂತ ಬಹು ಎತ್ತರವಾಗಿದ್ದು ಪಟ್ಟಣದ ಹಿಂಭಾಗದಲ್ಲಿದ್ದುದರಿಂದ ನಗರ ಜನರ ವಿಹಾರಾರ್ಥವಾಗಿ, ಈ ಸ್ಥಳದಲ್ಲಿ ಧಾರ್ಮಿಕರನೇಕರು ಅಂದವಾದ ಆಸನಗಳನ್ನು ನಿರ್ಮಿಸಿದ್ದರು. ಸಂಜೆ ಹೊತ್ತಿನ ಸೂರ್ಯಾಸ್ತಮಾನವನ್ನೀಕ್ಷಿಸುವುದಕ್ಕೂ, ಸಮುದ್ರ ವಾತವನ್ನಾಸ್ವಾದಿಸುವುದಕ್ಕೂ ನಾಗರೀಕರನೇಕರು ಅಲ್ಲಿಗೆ ದಯಮಾಡಿಸಿದ್ದರು.

ಸ್ಥಳದ ಪ್ರಾಕೃತ ಲಕ್ಷಣವು ಬಹು ಮನೋಹರವಾಗಿತ್ತು. ಎದುರಿನಲ್ಲಿ ಸಮುದ್ರದ ದಡದ ವರೆಗೂ, ತಗ್ಗಾಗಿ ಚಾಚಿಕೊಂಡಿದ್ದ ಪ್ರದೇಶವೆಲ್ಲಾ, ನಿಬಿಡವಾದ ಗೃಹಸೌಮ್ಯಗಳಿಂದ ಕೂಡಿದ್ದಿತ್ತಾದರೂ, ಅಂಗಳಗಳಲ್ಲಿ ನೇರವಾಗಿ ಬೆಳೆದು ಆಗಲವಾದ ತಮ್ಮ ಹಸುರುಗರಿಗಳಿಂದ ಕೂಡಿ ಶೋಭಿಸುತ್ತಿದ್ದ, ಲಕ್ಷೋಪಲಕ್ಷ ನಾರೀಕೇಳ ವೃಕ್ಷಗಳಿಂದ ಮುಚ್ಚಲ್ಪಟ್ಟು ಪೇಕ್ಷಕರ ಕಣ್ಣಿಗೆ ಅದೊಂದು ವಿಸ್ತಾರವಾದ ತೆಂಗಿನ ತೋಪಿನ ಹಾಗೆ ಕಂಗೊಳಿಸುತ್ತಿತ್ತು. ಈ ತೋಪಿನ ಮಧ್ಯ ಮಧ್ಯ ಮಕ್ಕಳ ಕೂಗಾಟವೂ, ಮೋಟಾರ್ ಬಂಡಿಗಳ ಓಡಾಡುವ ರವವೂ ನೋಡುವವರ ಕಣ್ಣಿಗೆ ಆ ಕಲ್ಪ ವೃಕ್ಷಗಳು ವ್ಯರೆಮಾಡಿದ ಪಟ್ಟಣ ಬೀದಿಗಳ ಕುರುಹುಗಳನ್ನು ಕಾಣಿಸುತ್ತಿದ್ದವು.

ದಡದ ಉದ್ದಕ್ಕೂ ನಗರ ಕ್ಷೌರಿನ ಸೇರ್ಫಟರಂತೆ ನೇರವಾಗಿ ನಿಂತಿದ್ದ ಹೊಂಚಿನ ಕಾರ್ಖಾನೆಯ ಧೂಮಸ್ತಂಭಗಳು ನೆಲಜಲಗಳ ಸಂಗಮಸ್ಥಾನವನ್ನು ತೋರಿಸುವಂತಿದ್ದವು. ತಾರದ ಸೂರ್ಯಕಿರಣಗಳಿಂದ ಥಳಥಳಿಸುತ್ತಿದ್ದ ಸಮುದ್ರದಲ್ಲಿ ಬಹಿತ್ರಗಳನೇಕವು ನಿದ್ರೆ ಹೋದ ಹಾಗೆ ಗೋಚರಿಸುತ್ತಿದ್ದವು. ದಿನಮಣಿಯು ತನ್ನ ದಿವಸದ ಕೆಲಸವನ್ನು ತೀರಿಸಿ ಸಂಜೆಯ ಶಯ್ಯೆಗೆ ದಯಮಾಡಿಸುವವನ ಹಾಗೆ ದಿಗಂತದಲ್ಲಿ ಕಾಂತಿವಿಹೀನನಾಗಿ ಕಂಗೊಳಿಸುತ್ತಿದ್ದನು. ಬಳಲಿ ಬೇಸತ್ತು ಬಂದ ನನ್ನ ಪ್ರೀಯನ ವಿಶ್ರಾಂತಿಗೋಸುಗ ಚಮರ ದಿಕ್ಕಾಂತೆಯು ಸಜ್ಜು ಮಾಡಿದ ಹಂಸತೂಲಿಕಾ ತಲ್ಪದ ಹಾಸಿಗೆಯೋ ಎಂಬಂತೆ,ಸ್ವೇತವರ್ಣದ ಮುಗಿಲು ದಿಗಂತದಲ್ಲಿ ಹರಡಿತ್ತು. ತಾನು ಶಯನ ಗೃಹ ಪ್ರವೇಶಿಸುವುದನ್ನವಲೋಕಿಸಲು ಇಚ್ಛೈಸಿ ಬಂದ ಮಾನವರಿಗೆ ತನ್ನ ಸ್ವರೂಪವನ್ನು ತೋರಿಸಿ, ಅವರನ್ನು ಬಿಟ್ಟು ಹೋಗಲು ಮನಸ್ಸಿಲ್ಲದವನಂತೆ ಜಲಜ ಮಿತ್ರನು, ತನ್ನ ರಜೋಗುಣವನ್ನು ತೃಜಿಸಿ ಮೆಲ್ಲ ಮೆಲ್ಲನೆ ಕೆಳಗಿಳಿಯುತ್ತಿರಲು ತಾಯಿಯರ ತೊಡೆಯ ಮೇಲೆ ಕುಳಿತು ಅದನ್ನೇ ನೋಡುತ್ತಿದ್ದ ಎಳೆ ಮಕ್ಕಳು 'ಹೋದ, ಹೋವ, ಹೋಗಿಯೇಬಿಟ್ಟ' ಎಂದು ಭಗ್ನಪ್ತನೋರಥರಾಗಿ ಕೂಗುತ್ತಿದ್ದರು.

ಆಲ್ಲಿ ನೆರೆದಿದ್ದವರಿಗೆ 'ಇನ್ನು ನಿಮ್ಮ ನಿಮ್ಮ ಸ್ವಗೃಹಗಳಿಗೆ ದಯಮಾಡಿಸಿ' ಎಂದು ಸಾರುವನವನ ಹಾಗೆ ಮಂದಮಾರುತನು ಮಂದ ಮಂದವಾಗಿ ಬೀಸತೊಡಗಿದನು. ಸಾರಸ ಪಕ್ಷಿಗಳೂ, ವಾಯಸಗಳೂ ತಂತಮ್ಮ ನಿವಾಸಸ್ಥಾನಾಭಿಮುಖವಾಗಿ ಆಕಾಶ ಮಾರ್ಗವಲ್ಲಿ ಧಾರಿಹೋಗತೊಡಗಿದವು.. ಬಾವಲಿಗಳು ತಮ್ಮ ಸುಖ ನಿದ್ರೆಯಿಂದ ಎಚ್ಚತ್ತು ಮೇಪರಸಲು ಹೊರಬಿದ್ದವು. ಗೂಗೆಗಳು ತಂತಮ್ಮ ಪೊಟರೆಗಳಲ್ಲಿ ರೆಕ್ಕೆಬಡಿಯ ತೊಡಗಿದವು. ದೂರುದ ದೇಗುಲದಿಂದ ವಾದ್ಯಧ್ವನಿಯೂ ಮಹಮ್ಮದೀಯರ ಮಸೀದಿಯಿಂದ ನಮೂಜಿನ ಕೂಗೂ ಹತ್ತಿರದ ಮಠದಿಂದ ಘಂಟಾಘೋಶವೂ ಕೇಳಹತ್ತಿತು. ನಾಗರೀಕರೆಲ್ಲಾ ತಾವು ಬಂದಿದ್ದ ವಾಹನಗಳನ್ನೆಡರಿ ತಂತಮ್ಮ ಗೃಹಾಭಿಮುಖವಾಗಿ ಹೊರಟರು. ಸ್ಥಳವು ನಿರ್ಜನವಾಯಿತು.

ಸಮೀಪದಲ್ಲಿ ಹಳೇ ದೀಪಸ್ತಂಭವೊಂದು ನಿರಾಳವಾಗಿ ನಿಂತು ಸುತ್ತಮುತ್ತಲಿನ ಪ್ರದೇಶಕ್ಕೆಲ್ಲಾ 'ಹರಳೆಯ ಹಿಚ್ಚಿನಂತೆ ಧನ, ಆಯು, ಯೌವನ ಮುತ್ತು ಸೊಬಗು' ಎಂಬ ವೈರಾಗ್ಯವನ್ನು ಮೌನವಾಗಿ ಸಾರುವಂತಿತ್ತು. 'ಊರಿಗುಪಕಾರಿ, ಮನೆಗೆ ಮಾರಿ' ಎಂಬ ನಾಣ್ಣುಡಿಗೆ ಪೃಷ್ಠಾಂತ ಸ್ವರೂಪವಾದ ಈ ಸ್ತಂಭದ ಬುಡವು ತಾನು ತಲೆಯೆಲ್ಲಿ ಬೆಳಕನ್ನು ಧರಿಸಿರುವಾಗಲೇ ಕತ್ತಲೆಯಾಗಿರುತ್ತಿದ್ದದ್ದು ಈಗಲಂತೂ ಮತ್ತಷ್ಟು ಕಠಿಣವಾದ ನಿಶೆಯಿಂದ ಕವಿದಿತ್ತು.

ಸ್ವಲ್ಪ ಹೊತ್ತಿನಲ್ಲಿ ನಾಲ್ಕು ವ್ಯಕ್ತಿಗಳು ಪುಂಶ್ಚೋಚ್ಚರಣೆಯಿಂದ ನಿರ್ಮೂಣ ಮಾಡಲ್ಪಟ್ಟವರಂತೆ ತಲೆದೋರಿದರು. ಅವರು ಮೊದಮೊದಲು ರಹಸ್ಯನಾಗಿ ಪಿಸುಗುಟ್ಟುತ್ತಿದ್ದವರು ಕ್ರಮೇಣ ಸ್ಪಷ್ಟವಾಗುವಂತೆ ಮಾತಾಡತೊಡಗಿದರು. 'ಹೊಡೆಯುವುದೇನೋ ನಿಜ. ಆದರೆ ಗಾಯವಾಗದ ರೀತಿಯಲ್ಲಿ ಎಚ್ಚರ ತೆಗೆದುಕೊಳ್ಳಬೇಕು. ಕಡೆಗೆ ಬಲವೆಂದ ಕೇಸಿಗೆ ಆಸ್ಪದವಾದೀತು.' ಎಂಬದಾಗಿ ಒಬ್ಬನು ಹೇಳಿದನು.

'ಶಾಲೆಯ ಹುಡುಗರ ಮೇಲೆ ಕೇಸೇನೂ ನಡೆಯಲಾರದು. ಆದರೆ ತಾನೇ ಏನು? ಶಾಲೆಯಿಂದ ಡಿಸ್‌ಮಿಸ್ ಮಾಡ್ಯಾರು. ಇಲ್ಲದಿದ್ದರೂ ಇನ್ನು ನಾವು ಶಾಲೆಗೆ ಬರುವಂತಿಲ್ಲ. ಆದುದರಿಂದ ನಮಗೆ ಆತನ ಮೇಲಿರತಕ್ಕ ಸೇಡನ್ನು ಸಂಪೂರ್ಣ ತೀರಿಸಿಬಿಡಲೇ ಬೇಕು. ಆಗುವದಾದರೆ ಕೊಂದೇ ಹಾಕಿಬಿಡಬೇಕೆಂಬುದೇ ನನ್ನ ಮತ' ಎಂದು ದೃಢಾಂಗನೂ, ಗರ್ವಭಾಷಿತನೂ ಆದ ಮತ್ತೋರ್ವನು ಹೇಳಿದನು.

'ಹೊಡೆಯಲಿಕ್ಕೆ ತೊಡಗಿದ ಮೇಲೆ ಸತ್ತನೋ ಬದುಕಿದನೋ? ಅದೆಲ್ಲಾ ನಮ್ಮ ಗೊಡವೆಗೆ ಸೇರಿದ ವಿಷಯವಲ್ಲ. ಅವನು ಅಷ್ಟು ಕರುಣ ಹೀನನಾಗಿ ಮೂರು ವರ್ಷಗಳಿಂದಲೂ ನಮ್ಮನ್ನು ಮೇಲಿನ ತರಗತಿಗೆ ಹೋಗಗೊಡದಂತೆ ಅಡ್ಡಿ ಮಾಡಿದನಲ್ಲಾ, ಅಂಥಾ ಪಾಪಿಯ ವಿಷಯದಲ್ಲಿ ಕರುಣಾಪೇ? ಈತನು ಒಮ್ಮೆ ಕೈಗೆ ದೊರಕಿದ್ದರೆ ಮತ್ತೆ ನೋಡಬಹುದು, ಈ

ರುಣ ಎಲ್ಲಿರುವುದೆಂಬದನ್ನು ? ನೀಚನ ಹೆಸರು ಸಹ ಉಳಿಯಬಾರದು.' ಎಂದು ಮೂರನೆಯವನು ಹೇಳಿ ತಾನು ಆಲಂಗಿಸಿಕೊಂಡಿದ್ದ ಪುತ್ತೊಬ್ಬನನ್ನು, 'ಏನು ಹೇಳುವೆ, ನನ್ನ ಅಭಿಪ್ರಾಯಕ್ಕೆ?' ಎಂದು ಕೇಳಿದನು.

ಮರುತ್ತರವಾಗಿ ಅವನು ತನ್ನ ಭುಜದ ಮೇಲಿದ್ದ ಸಂಗಾತಿಯ ಕೈಯ್ಯನ್ನು ತೆಗೆದು ಪೂರ್ವೋಕ್ತಧೃಡಾಂಗನಾದ ವ್ಯಕ್ತಿಯ ಎದುರಿಗೆ ಬಂದು ಅವನ ಭುಜದ ಮೇಲೆ ತನ್ನ ಕೈಯನ್ನು ಇಟ್ಟು 'ನೀನು ಹೇಳುವುದೇನು? ನೀಚನ ತಲೆಯನ್ನು ಒಡೆದರೂ ನನ್ನ ಸೇಡು ತೀರಲಾರದು. ಸಾಧ್ಯವಾದರೆ ಅವನನ್ನೂ ಕೊಂದೇ ಬಿಡಬೇಕು. ಆವನ ಕೆನ್ನೆಗೆ ನನ್ನ ಪಾದರಕ್ಷೆಯಿಂದ ರಕ್ತ ಸುರಿಯುವ ವರೆಗೆ ಹೊಡೆಯಬೇಕೆಂಬ ಇಚ್ಛೆಯು ನನಗಿರುವದು. ಆದರೆ ನನಗೆ ಇದು ಒಂದು ಆನರ್ಥ ಶಿರೋವೇದನೆಯು ಎಲ್ಲಿಂದ ಪ್ರಾರಂಭವಾಯಿತೋ ಏನೋ? ಒಂದು ಸಲ ಮೆಲಗಿದರೆ ಸಾಕು ಎಂದು ಆಗಿದೆ. ನಾನು ಮಾತ್ರ ಬಂದಿದ್ದರೆ–' 'ಹಾಗಾದರೆ ನೀನು ಬರುವ ಹಾಗಿಲ್ಲವೇನು? ಇದು ಎಂಥಾ ಕೆಲಸ!' ಎಂದು ಮತ್ತೊಬ್ಬನು ಮೇಲ್ನೋಟ ಕೇಳಿದನು. ಅದಕ್ಕೆ ಆ ವ್ಯಕ್ತಿಯು ತಮ್ಮ ಮುಂದಾಳಾದ ಧೀರ್ಘ ಕಾಯನ ಮುಖವನ್ನೇ ನೋಡುತ್ತಾ, ನಾನೇನು ತಪ್ಪಿಸಿಕೊಳ್ಳಲು ನೆಪ ಹೇಳುವದೆಂದು ತಿಳಿದೆಯೋ? ಆನಂದ ಪ್ರಸಾದನಿಗೆ ಎಲ್ಲಾ ಗೊತ್ತಿದೆ' ಎಂದನು. ಆನಂದನು ನಸುನಗೆಯಿಂದ ಚಾರುದತ್ತನನ್ನು ಆಲಂಗಿಸಿ, 'ನೀನು ಬರುವುದು ಬೇಡ. ನಿನ್ನ ಬವಲು ನಾನೇ ಪೂರೈಸಿಬಿಡುತ್ತೇನೆ. ಬೆಳಿಗ್ಗೆ ಮಾತ್ರ ನೀನು ನಮ್ಮ ಸಂಕೇತಸ್ಥಾನಕ್ಕೆ ತಪ್ಪದೆ ಬರಬೇಕು.'

'ಬರದಿರುವುದುಂಟೇ? ನೀವು ಮಾತ್ರ ಆ ನೀಚನಿಂದ ಇನ್ನು ಮುಂದಕ್ಕಾದರೂ ಇತರ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗದ ಹಾಗೆ ಅವನನ್ನು ನಾಮಾವಸಿಷ್ಟನನ್ನಾಗಿ ಮಾಡುವುದು. ನನಗೆ ತಲೆಬೇನೆಯೊಂದಿಲ್ಲದಿದ್ದರೆ ಖಂಡಿತವಾಗಿಯೂ ನಾನು ಬರುತ್ತಿದ್ದೆನು' ಎಂದು ಹೇಳಿ ಚಾರುದತ್ತನು ಹೊರಡಲುದ್ಯುಕ್ತನಾದನು. ಆನಂದಪ್ರಸಾದನು ಅವನನ್ನು ಸ್ವಲ್ಪ ದೂರ ಹಿಂಬಾಲಿಸಿ ಅವನ ಕಿವಿಯಲ್ಲಿ ಏನೋ ಪಿಸುಗುಟ್ಟಿ ಹಿಂತಿರುಗಿದನು. ಚಾರುದತ್ತನು ಬಾಕಿ ಮೂವರನ್ನು ಬೀಳ್ಕೊಂಡು ಬೋರ್ಡಿಂಗಿಗೆ ಹೊರಟು ಹೋದನು.

ಇತ್ತಲಾಗಿ ಆನಂದ ಪ್ರಸಾದನು ಅವನ ಇಬ್ಬರು ಗೆಳೆಯರು ನಿಶೆಯಲ್ಲಿ ಗುಪ್ತವಾಗಿ ನಡೆದು ಶಾಲಾ ಗಣಿತ ಶಿಕ್ಷಕರ ಅಂಕಳವನ್ನು ಸೇರಿದರು.

ಈ ರಹಸ್ಯವನ್ನು ಕೆಲವು ವಿದ್ಯಾರ್ಥಿಗಳ ಹುಬ್ಬೇನ ಮೊವಲೇ ತಿಳಿದಿದ್ದ ಶಿಕ್ಷಕರು ತಮ್ಮ ಆತ್ಮರಕ್ಷಣೆಯ ಸಲುವಾಗಿ ಪೊಲೀಸು ಅಧಿಕಾರಿಗಳ ಸಹಾಯವನ್ನು ಪಡೆದು ಇಬ್ಬರು ಕಾನ್‌ಸ್ಟೇಬಲುಗಳನ್ನು ಮನೆಯಲ್ಲಿ ಆ ರಾತ್ರಿ ಬಚ್ಚಿಟ್ಟಿದ್ದರು. ಮೂವರು ವಿದ್ಯಾರ್ಥಿಗಳು ಅಂಗಳವನ್ನು ಪ್ರವೇಶಿಸಿದೊಡನೆ ಮನೆಯ ಕಿಟಕಿಗಳಿಗೂ ಬಾಗಿಲುಗಳಿಗೂ ಕಲ್ಲು ಹೊಡೆಯತೊಡಗಿದರು. ಆನಂದಪ್ರಸಾದನು ತನ್ನ ಧೈರ್ಯವನ್ನೂ, ಮುಂದಾಳುತನವನ್ನೂ ತೋರಿಸುವ ಕುತೂಹಲದಿಂದ ಎದುರು ನಿಂತು ಪೊಲೀಸಿನವರನ್ನು ಗದರಿಸತೊಡಗಿದನು. ಅವನ ಸಂಗಾತಿಗಳಿಬ್ಬರು ತಮ್ಮ ಕಾಲುಗಳಿಗೆ ಬುದ್ಧಿ ಹೇಳಿದರು. ಆನಂದ ಪ್ರಸಾದನು ಮಾತ್ರ ಪೊಲೀಸರ ಕೈಗೆ ಸಿಕ್ಕಿ ಸೆರೆಮನೆಗೆ ಒಯ್ಯಲ್ಪಟ್ಟನು. [ಸಶೇಷ.

ಕೊಡಗು ನ್ಯಾಯವಿಧಾಯಕ ಸಭೆಯಲ್ಲಿ ಅಧ್ಯಕ್ಷರು ಮೂಡಿದ ಪ್ರಾರಂಭ ಭಾಷಣ.

ಕೊಡಗು ನ್ಯಾಯವಿಧಾಯಕ ಸಭೆಯ ಕಳೆದ ಮಿಟಿಂಗಿನ ನನ್ನ ಭಾಷಣದಲ್ಲಿ, ಕೊಡಗಿನ ಆರ್ಥಿಕ ಸ್ಥಿತಿಯ ಪರಿಶೋಧನೆ ಬಗ್ಗೆ ಇಂಡಿಯಾ ಸರ್ಕಾರದವರು ಒಬ್ಬ ಆಫೀಸರನ್ನು ನೇಮಿಸಿರುವರೆಂದು ತಿಳಿಸಿದ್ದೆನು. ಈ ಆಫೀಸರಾದ ಮೆ. ಪಿ. ಕೆ. ವಟ್ಟಾಲ್‌ರವರು ಕಳೆದ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಕೊಡಗನ್ನು ಸಂದರ್ಶಿಸಿ ಕೊಡಗಿನ ಉದ್ಯೋಗಸ್ಥ ಮತ್ತು ಉದ್ಯೋಗಸ್ಥರಲ್ಲದ ಪ್ರತಿನಿಧಿಗಳೊಡನೆ ಕೊಡಗಿನ ಆರ್ಥಿಕ ಸಮಸ್ಯೆಯನ್ನು ಚರ್ಚಿಸಿದರು. ಈ ವಿಚಾರಣೆಯ ಫಲಿತಾಂಶವಾದ ರಿಪೋರ್ಟು ತಯಾರಾಗಿ ಇಂಡಿಯಾ ಸರ್ಕಾರದ ಕೈಯ್ಯಲ್ಲಿದೆ. ಈ ರಿಪೋರ್ಟಿನಲ್ಲಿ ಚೀಫ್ ಕಮಿಶನರ ಅಧಿಕಾರದ ಒಳಗಿರುವ ಸಲಹೆಗಳ ಬಗ್ಗೆ ಆರ್ಡರು ಪಾಸು ಮಾಡಲಾಗಿದೆ. ಬಾಕಿ ಇರುವ ಸಲಹೆಗಳು ಇಂಡಿಯಾ ಸರ್ಕಾರದ ಅಪ್ಪಣೆಯನ್ನು ಕಾಯುತ್ತಿವೆ. ಈ ಆರ್ಥಿಕ ಪರಿಶೀಲನೆಯ ಸಂಬಂಧ ಈ ದಿನ ಒತ್ತಿ ಹೇಳಲು ಅನೇಕ ವಿಚಾರಗಳಿವೆ. ಪ್ರಾರಂಭದಲ್ಲಿ ಹೇಳುವುದಾದರೆ, ಕೊಡಗಿನ ಆಯವ್ಯಯದ ಲೆಕ್ಕವನ್ನು ಪರಿಶೀಲಿಸಿದ ಯಾವನಾದರೂ, ಕಠಿಣ ತರವಾದ ಸಿಬ್ಬಂದಿಖೋತೆಯು ಅಗತ್ಯವೆಂದು ತಿಳಿಯದೆ ಇರಲಾರನು. ಸಿಬ್ಬಂದಿಖೋತೆಯ ಆವಶ್ಯಕತೆಯು ಜನತೆಗೆ ಮನವರಿಕೆಯಾಗಿದೆ ಎಂಬದು ಕಳೆದ ಕೌನ್ಸಿಲಿನಲ್ಲಿ ಪಾಸಾದ ಠರಾವುಗಳಿಂದ, ಗೊತ್ತಾಗುವದು. ಮೆ. ವಟ್ಟಾಲರ ಭೇಟಿ ಮಾಡಿದ ಕೌನ್ಸಿಲ್ ಪ್ರತಿನಿಧಿಗಳೂ, ಇತರ ಮಹನೀಯರೂ ಕೆಲವು ಪ್ರಯೋಜನಕಾರಕ ಸಲಹೆಗಳನ್ನು ಕೊಟ್ಟಿರುವರು. ಇಂದಿನ ಸಭೆಯಲ್ಲಿ ಚರ್ಚಿಸಲ್ಪಡತಕ್ಕದ್ದಿರುವ ಎರಡು ಮೂರು ಠರಾವುಗಳು ಕೊಡಗಿನ ಭವಿತವ್ಯದ ರಾಜಕೀಯ ಸಮಸ್ಯೆಯು ಒಂದು ತೀರ್ಮಾನಕ್ಕೆ ಬರುವ ಮೊದಲು ಸಿಬ್ಬಂದಿ ಖೋತೆಯನ್ನು ಜಾರಿಗೆ ತರಬಾರದೆಂಬ ಭಾವನೆಯನ್ನು ತೋರಿಸುತ್ತವೆ. ಕೊಡಗಿನ ಪರಿಸ್ಥಿತಿಯು ಈಗಿರುವುದಕ್ಕಿಂತ ಬಹಳಾ ದರೆ ಈ ಕಠಿಣ ತರವ ಖೋತೆಯು ಅನಾವಶ್ಯಕವೆಂದು ತಿಳಿಯಲು ಕಾರಣಗಳಿವೆಯೆಂದು ನಾನು ಯೋಚಿಸುವುದಿಲ್ಲ. ಈಗ ಕೊಡಗು, ಪ್ರಾಂತೀಕ ಉತ್ಪತ್ತಿಗಳನ್ನೇ ಆವರಿಸಿಕೊಂಡಿರುವ ಪ್ರತ್ಯೇಕ ಪ್ರಾಂತ್ಯ. ಯಾವ ಸ್ಥಿತಿಯಲ್ಲಿದ್ದರೂ ಖರ್ಚಿನಲ್ಲಿ ಖೋತೆಯನ್ನೂ, ಉತ್ಪತ್ತಿಯಲ್ಲಿ ಅಭಿವೃದ್ಧಿಯನ್ನೂ ಮಾಡಬೇಕು. ಪ್ರಾಮುಖ್ಯವಾದದ್ದೆಂದರೆ ಪ್ರಾಂತದ ಅಡಳಿತದ ಪುನರ್ಘಟನೆಯನ್ನು ತಡಮಾಡದೆ ಜಾರಿಗೆ ತರುವಂಥಾದ್ದು. ಈ ಕಾರಣದಿಂದ ಈಗಿನ ಪರಿಶೋಧನೆಯ ಬಗ್ಗೆ ಬೇರೆ ವಿಧದ ಯೋಚನೆ ಮಾಡುವದು ಅಸಾಧ್ಯವಾಗಿದೆಯಲ್ಲದೆ ಉದ್ಯೋಗಸ್ಥರಲ್ಲದ ಪ್ರತಿನಿಧಿಗಳ ವಿಚಾರ ಬಗ್ಗೆ ಈಗಿನ ಸಿಬ್ಬಂದಿ ಖೋತೆಯನ್ನು ಇಡಲಿಕ್ಕೂ ಅಸಾಧ್ಯವಾಗಿದೆ. ಅವರ ಸೂಚನೆಗಳು ಶೃದ್ಧೆಯಿಂದ ವಿಮರ್ಶಿಸಲ್ಪಟ್ಟಿರುವವು. ಅವುಗಳಲ್ಲಿ ಅನೇಕ ಜಾರಿಗೆ ತರಲ್ಪಟ್ಟಿರುವವು. ಈ ಖೋತೆಯು ಮತ್ತು ಅದನ್ನು ಜಾರಿಯಲ್ಲಿ ತರುವ ವಿಧಾನವು ಈ ಪ್ರಾಂತದ ಆರ್ಥಿಕ ಸ್ಥಿತಿಯಿಂದ ಆವಶ್ಯಕ ಮತ್ತು ಅಪರಿಹಾರ್ಯವೆಂದು ಕೊಡಗಿನ ಜನತೆಗೆ ತಿಳಿಯಬಹುದೆಂದು ನಂಬುತ್ತೇನೆ. ಖೋತೆಯನ್ನು ಜಾರಿಗೆ ತರುವದು ಯಾರಿಗೂ ಪ್ರಿಯವಲ್ಲ. ಇದರಿಂದ ಅನೇಕ ವ್ಯಕ್ತಿಗಳಿಗೆ ಕಷ್ಟ ಸಂಭವಿಸದೆ ಇರಲಿಕ್ಕೂ ಇಲ್ಲ. ಆದರೆ ಈ ಕೆಲವು ವ್ಯಕ್ತಿಗಳ ದೃಷ್ಟಿಯಿಂದ ಒಂದು ಪ್ರಾಂತವು ಹೊರಲಸಾಧ್ಯವಾದ ದೊಡ್ಡ ಆಡಳಿತ ಖರ್ಚನ್ನು ಹೊರಬೇಕೆಂಬುದು ಸಮಂಜಸವಾದ ಕಾರಣವಾಗಲಿಕ್ಕಿಲ್ಲ. ಸರ್ಕಾರವು ತೊಂದರೆಗಳನ್ನು ಆದಷ್ಟು ಮಟ್ಟಿಗೆ ಶಾಂತ ಮಾಡುವ ಆಶೆಯಿಂದಿದೆ. ಇಂಡಿಯಾ ಗವರ್ನ್‌ಮೆಂಟು ಸಿಬ್ಬಂದಿಖೋತೆಯನ್ನು ಜಾರಿಗೆ ತರುವಾಗ 1931ನೇ ಇಸವಿಯಲ್ಲಿ ಕೊಡಲ್ಪಟ್ಟಿದ್ದ ಕ್ರಮವನ್ನೇ ಅನುಸರಿಸಲು ಜನುಮತಿ ಕೊಟ್ಟಿದೆಯೆಂದು ಹೇಳಲು ನನಗೆ ಆನಂದವಾಗುತ್ತದೆ.

ಚೀಫ್ ಕಮಿಶನರ ಅಪ್ಪಣೆ ಮೇರೆ ಮಾಡಿದ ಖೋತೆಯಿಂದ ನೀವು ಕಮ್ಮಿ ಸಂಬಳದ ಉದ್ಯೋಗಸ್ಥರ ಸರ್ವಿಸೇ ತೆಗೆದು ಹಾಕಲ್ಪಟ್ಟಿದೆ; ಕಮ್ಮಿ ಸಂಬಳದವರೇ ಖೋತೆಯ ಕಷ್ಟ ಅನುಭವಿಸಬೇಕೆಂದು ಊಹಿಸಬಹುದು. ಆದರೆ ಹಾಗಲ್ಲ; ಕೆಳ ಸರ್ವಿಸಿನವರಲ್ಲಿ ಖೋತೆಯು ಚೀಫ್ ಕಮಿಶನರವರ ಅಪ್ಪಣೆ ಮೇರೆ ನಡೆಯುವುದರಿಂದ ದೊಡ್ಡ ಸಂಬಳದ ಉದ್ಯೋಗಸ್ಥರ ಮೇಲೆ ಇದು ಜಾರಿಗೆ ಬರುವ ಕೆಲವು ತಿಂಗಳುಗಳಿಗೆ ಮೊದಲು ಕೆಳ ಉದ್ಯೋಗಸ್ಥರಿಗೆ ಬರುತ್ತದೆ. ದೊಡ್ಡ ಸಂಬಳದ ಉದ್ಯೋಗಸ್ಥರನ್ನು ತೆಗೆಯುವ ಸಲಹೆಗಳ ಜಾರಿಗೆ ಇಂಡಿಯಾ ಸರ್ಕಾರದ ತೀರ್ಮಾನವು ಅಗತ್ಯ. ಸಿಬ್ಬಂದಿ ಖೋತೆಯ ಸಮಗ್ರ ಯೋಜನೆಯೇ ಒಡನೆ ಜಾರಿಗೆ ಬರಬಹುದೆಂದು ಊಹಿಸಬಹುದು. ಆರ್ಥಿಕ ಪರಿಶೋಧನಾ ಆಫೀಸರು ತನ್ನ ಯೋಜನೆಯನ್ನು ಈ ಆಡಳಿತದ ಸಹಾಯದಿಂದ ಪರ್ಯಾಲೋಚಿಸುವಾಗ ಆಡಳಿತಕ್ಕೆ ತೊಂದರೆ ಬಾರದಂಥಾ ಭಾಗಗಳನ್ನೇ ತೆಗೆಯಲು ಎಚ್ಚರಿಕೆ ತೆಗೆದುಕೊಂಡಿರುವರು. ಅವರ ಸಲಹೆಗಳಿಂದ ಕೊಡಗಿನ ಆಡಳಿತ ಖರ್ಚು ಕಮ್ಮಿಯಾಗಿದ್ದರೂ, ಜನತೆಯ ಬಗ್ಗೆ ಸರ್ಕಾರದ ಲಾಭದಾಯಕವಾದ ಕಾರ್ಯಕ್ರಮಕ್ಕೆ ಇದರಿಂದ ಧಕ್ಕೆ ಬರಲಿಲ್ಲವೆಂಬ ನಂಬಿಕೆ ನನಗಿದೆ. ಕೊನೆಯದಾಗಿ, ಈ ವರದಿಯು ಇಂಡಿಯಾ ಸರ್ಕಾರದ ಸೊತ್ತಾಗಿರುವುದರಿಂದ ಅದು ಗುಟ್ಟಿನಲ್ಲಿದೆ. ಈ ಕಾರಣದಿಂದ ಅವನ್ನು ಸಭೆಯ ಮುಂದಡಲು ಅಸಾಧ್ಯವಾಗಿದೆ.

ವ್ಯವಸಾಯ ಪರಿಶೋಧನೆಯ ಇಂಪೀರಿಯಲ್ ಕೌನ್ಸಿಲಿನವರು ಕೊಡಗಿನ ವ್ಯವಸಾಯ ಆಗತ್ಯಗಳನ್ನು ಮತ್ತು ಸಾಧ್ಯತೆಗಳನ್ನು ಪರಿಶೋಧಿಸಲು ಮೆ. ಎ. ಕೆ. ಯಜ್ಞನಾರಾಯಣ ಐಯ್ಯರರನ್ನು ಕಳುಹಿಸಲು ನಿಶ್ಚೈಸಿರುವರೆಂದು ಈ ಕೌನ್ಸಿಲಿಗೆ ತಿಳಿಸಲು ನನಗೆ ಸಂತೋಷವಾಗುತ್ತದೆ. ಅವರು ಈಗ ಕೊಡಗಿನಲ್ಲಿದ್ದಾರೆ. ಮತ್ತು ಇಲ್ಲಿಯ ವ್ಯವಸಾಯ ಪರಿಶೋಧನೆಯನ್ನು ನಡೆಸುವರು. ಈ ಪುಟ್ಟ ದೇಶದ ವ್ಯವಸಾಯ ಸಾಧ್ಯಾಸಾಧ್ಯತೆಗಳ ಬಗ್ಗೆ ಇರುವ ಕಷ್ಟಗಳನ್ನು ಮರೆಯದೆ ಮಿ. ಯಜ್ಞನಾರಾಯಣ ಐಯ್ಯರರಂಥ ಅನುಭವಸ್ಥ ಮತ್ತು ಶಕ್ತ ಆಫೀರರನ್ನು ಕಳುಹಿಸಿದುದಕ್ಕೆ ಇಂಪೀರಿಯಲ್ ಕೌನ್ಸಿಲಿನವರನ್ನು ವಂದಿಸಬೇಕು. ಇವರ ಪರಿಶೋಧನೆಯು ಕೆಲವು ತಿಂಗಳುಗಳ ವರೆಗೆ ಇದ್ದು, ಕೊಡಗಿನ ವ್ಯವಸಾಯ ಇಲಾಖೆಯವರಿಗೆ ಪರಿಶೋಧನಾ ಸಹಾಯವು ದೊರೆಯುವುದಲ್ಲದೆ, ಅವರ ಕೆಲಸಗಳಲ್ಲೂ ತಕ್ಕ ಮಾಹಿತಿ ಸಿಗುವುದು. ಆದರೂ ಈ ಪರಿಶೋಧನೆಯು ಪ್ರಾಂತೀಕ ತೀರ್ವೆ ಮೇಲೆಯೂ ವಕ್ಕೆಯನ್ನೂ ತಾರದು.

ಭೂಮಿ ಅಡಮಾನ ಬ್ಯಾಂಕು ಮತ್ತು ಸಾಲ ನಿವಾರಣೆ ಬೋರ್ಡು ಸ್ಥಾಪನಾ ಪ್ರಶ್ನೆಯು ಬಹಳ ಕಾಲದಿಂದಲೂ ವಿಚಾರದಿಂದಿದೆ. ಆದರೆ ಈ ವರ್ಷ ಪುನಹ ಈ ಸಮಸ್ಯೆಯನ್ನು ವಿಮರ್ಶಿಸಿದಾಗ್ಯೆ ದೇಶದ ಆರ್ಥಿಕ ಮುಗ್ಗಟ್ಟಿನಿಂದ ಭೂಮಿ ಅಡಮಾನ ಬ್ಯಾಂಕನ್ನು ಸರ್ಕಾರದಿಂದ ಸ್ಥಾಪನೆ ಮಾಡುವದು ಅಸಾಧ್ಯವಾಗಿ ಕಂಡು ಬಂದಿದೆ. ಈಗ ಭೂಮಿ ಅಡಮಾನ ಬ್ಯಾಂಕಿಲ್ಲದೆ ಸಾಲನಿವಾರಣೆ ಬೋರ್ಡನ್ನು ಪ್ರಯೋಜನಕಾರಕವಾಗಿ ನಡೆಸಲು ಸಾಧ್ಯವಿದೆಯೇ ಎಂಬ ಪ್ರಶ್ನೆ ಇದೆ. ಈ ವಿಚಾರ ಬರುವ ಕೌನ್ಸಿಲ್ ಮಿಟಿಂಗಿನ ಮೊದಲು ತಿಳಿಸಬಹುದೆಂದು ಆಶಿಸುತ್ತೇನೆ.

ಈ ಸಭೆಯ ಮುಂದಿರುವ ಪ್ರಾಮುಖ್ಯ ಕೆಲಸವೆಂದರೆ ಈ ದೇಶದಲ್ಲಿ ಲೇವಾದೇವಿಯನ್ನು ಕ್ರಮಗೊಳಿಸಲು ಏರ್ಪಟ್ಟಿರುವ ಮಸೂದೆಯ ಯೋಚನೆ. ಈ ಮಸೂದೆಯು ಬ್ರಿಟಿಷ್ ಇಂಡಿಯಾದ ಬೇರೆ ಪ್ರಾಂತ್ಯಗಳಲ್ಲಿರುವ ಕಾಯಿದೆಯನ್ನಯ ನಿರ್ಮಿಸಲ್ಪಟ್ಟಿದೆ. ಇದರಿಂದ ಜನತೆಯ ಜೀವನದಲ್ಲಿ ಅಮೋಘ ಬದಲಾವಣೆಯಾಗುವ ಪ್ರಯುಕ್ತ ಈ ವಿಚಾರ ನೀವು ಚೆನ್ನಾಗಿ ಪರ್ಯಾಲೋಚಿಸುವಿರಾಗಿ ಕೇಳಿಕೊಳ್ಳುತ್ತೇನೆ.

ನಿಮ್ಮ ಮುಂದಿಡಲು ಇನ್ನು ಒಂದೇ ವಿಚಾರ ಉಳಿದಿದೆ. ಲೇಂಡ್ ಮತ್ತು ರೆವಿನ್ಯೂರಿಗ್ಯುಲೇಶನಿನ ಪ್ರಾಮುಖ್ಯ ರೂಲ್ಸುಗಳನ್ನು ಪರಿಷ್ಕರಣ ಮಾಡಲು ತೊಡಗಿದ್ದೇವೆ. ಇವು ಕೊಡಗು ಗಜೆಟಿನಲಿ ಪ್ರಕಟವಾಗಿವೆ. ಕೆಲವು ಸಮಯದ ಹಿಂದೆ ಇದ್ದ ರೂಲ್ಸುಗಳು ಸರಿಯೊಗಿ ಅರ್ಥವಾಗುತ್ತಿರಲಿಲ್ಲ. ಈ ಹೊಸ ರೂಲ್ಸುಗಳು ಸರ್ಕಾರಕ್ಕೂ, ಉದ್ಯೋಗಸ್ಥರಿಗೂ, ಜಮಿನ್ದಾರರಿಗೂ ಸುಲಭವಾಗಿ ಜಾರಿಗೆ ತರಲು ಸಾಧ್ಯವಾಗುವಂತಿವೆ.

ಸಂಭಾವಿತರೆ, ಹೆಚ್ಚು ಕಾಲ ವಿಳಂಬ ಮಾಡದೆ ನಾವು ನಮ್ಮ ಮುಂದಿರುವ ಕಾರ್ಯಕ್ಕೆ ತೊಡಗುವ.

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,
52–20 ಬೆಂಗಳೂರು ಸಿಟಿ.

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,
52–20 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅನೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937 ರಲ್ಲಿ ಮಾಡಿದ ಉದ್ಯೋಗ ರೂ. 2,53,15,500.
1937 ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 26 ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್
ಸೊಸೈಟಿ ಲಿಮಿಟೆಡ್,
12, ಸೌತ್ ಪೆರೇಡ್, ಬೆಂಗಳೂರು.

52–35

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ರಪಿಇ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕೆ.
ಮತ್ತು ಕಂಪೆನಿ,
(52–48) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರ 'ಕೊಡಗು' ಪತ್ರಿಕೆಯ ಚಂದಾ ಕಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೂ.
ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತವ್ಯನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮೊದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.
ಹುದಿಕೇರಿ—ಮ. ಅಜ್ಜಮಾಡ ಮೊದಪ್ಪನವರು ಮತ್ತು ಮೆ. ಜಿ. ಮೊದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚಿಟ್ಟೊಳಂಡ ಮೊಣಯ್ಯನವರು.
ಸೋಮವಾರಪೇಟೆ—ಮೆ ಕೆ ಪೊಗಪ್ಪನವರು.
ನಾಪೋಕ್ಲು—ಮೆ. ಬಿಳ್ಳಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

17 ಸಿ. ಹೆಚ್. ರಾಮಣ್ಣಿ ವೈದ್ಯರ್.

ಮೂರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, **ಪೊಚರ್** ಪುಸ್ತಕಗಳೂ ಅಲ್ಲದೆ ಜಮ್ಮಮುಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅನುಲ್ಲಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬಳಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳು ಬೆಲೆ: 0-1-0
೨ ಹೊಸ ಮಾದರಿ ,, ,, 0-1-3
೩ ಮೆಡಿಕೇಟಿಡ್ ನಂ. ೧, ಸೀಸೆಯಲ್ಲಿ ,, 0-4-0

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೆಳೆತಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0-4-0

ಹಿಮತೈಲ

ಮೆದುಳಿಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ಸಹ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ. ಬೆಲೆ: 0-8-0 ಮತ್ತು ರೂ. 1.

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ನಮ್ಮ ಸ್ಟಾಕಿಸ್ಟರು:—

ಮಡಿಕೇರಿ:—ಮೆಸರ್ಸ್ ದಿ. ಮಂಗಳೂರು ಸ್ಟೋರ್ಸ್, ಮತ್ತು ಚಕ್ರಪಾಣಿ ಶೆಟ್ಟಿ, ಸ್ಟೇಷನರ್ಸ್ ಮತ್ತು ಬುಕ್ ಸೆಲ್ಲರ್ಸ್.
ಸೋಮವಾರಪೇಟೆ:—ಪುಟ್ಟಯ್ಯ ಶೆಟ್ಟ & ಸನ್ಸ್.
ಫ್ರೇಜರ್‌ಪೇಟೆ:—ಕೃಷ್ಣಯ್ಯ ಸೆಟ್ಟಿ & ಸನ್ಸ್, ಮತ್ತು ಮೈಲಾರ್ ಸೆಟ್ಟಿ & ಸನ್ಸ್.
ವೀರಾಜಪೇಟೆ:—ರಾಮಕೃಷ್ಣ ರಾವ್, ಜಾಂಡೂ ಫಾರ್ಮಸಿಯ ಏಜೆಂಟರು.
ಗೋಣಿಕೊಪ್ಪಲು:—ಎ. ಎನ್. ಹುಚ್ಚಯ್ಯ, ಜನರಲ್ ಮರ್ಚೆಂಟ್. [31]

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮೂಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13.
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು.
ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲು ಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

52-44 **ಮೆ. ಡಿ. ಶೇಷಾದ್ರಿ,** ಇನ್ಸ್‌ಪೆಕ್ಟರು, ಶಿವಮೊಗ್ಗಾ.

Printed & Published by P. I. Belliappa, at 'Kodagu' Press Mercara for 'Kodagu' Ltd.